ಶ್ರೀರಾಮನಾಮಾವಲಿಃ

ಶ್ರೀಭಾರತೀಪ್ರಕಾಶನ

ಶ್ರೀರಾಮನಾಮಾವಲಿಃ

ಶ್ರೀಭಾರತೀ ಗ್ರಂಥಮಾಲಿಕೆ

ಪುಷ್ಪ - ೩೨

ಸಂಪಾದನ

ಧರ್ಮಶಾಖೆ

ಹವ್ಯಕಮಹಾಮಂಡಲ, ಶ್ರೀರಾಮಚಂದ್ರಾಪುರಮಠ

ಪ್ರಕಾಶಕರು

ಶ್ರೀಭಾರತೀಪ್ರಕಾಶನ

SHREERAMANAMAVALIHI
Published by : Sri Bharati Prakashana
Shree Ramashrama, No.2/A, J.P. Road, Girinagar 1st Stage,
Bangalore - 560 085. Karnataka, INDIA.
Tel : +91-80-26724979, 26721510
E-mail : info@srimath.org Web : www.srimath.org

© Publisher

First Edition - 2011

Pages : xvi + 48

Price : 20/-

Edited by :
DHARMASHAKHA
Havyakamahamandala,
Shree Ramachandrapura Math.

Printed at :
SPAN PRINT
No.67, 24 'A' Cross, BSK 2nd Stage,
Karesandra, Bangalore - 560 070
Tel . 080 - 2671 8831
E-mail : spanprint@gmail.com

॥ ಪ್ರಸೀದತು ಶ್ರೀರಾಮಚಂದ್ರಃ ॥

ಗತಸಂಖ್ಯಾ : ೪೦೩

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ ಪದವಾಕ್ಯಪ್ರಮಾಣಪಾರಾವಾರಪಾರೀಣ

ಯಮನಿಯಮಾಸನಪ್ರಾಣಾಯಾಮಪ್ರತ್ಯಾಹಾರಧ್ಯಾನಧಾರಣಸಮಾಧ್ಯಷ್ಟಾಂಗಯೋಗಾನುಷ್ಠಾನನಿಷ್ಠ

ಷಡ್ದರ್ಶನಸ್ಥಾಪನಾಚಾರ್ಯ ತಪಶ್ಚಕ್ರವರ್ತ್ಯಾದ್ಯನೇಕವಿಶೇಷಣವಿಶಿಷ್ಟ

ಶ್ರೀಮಜ್ಜಗದ್ಗುರುಶಂಕರಾಚಾರ್ಯಶಿಷ್ಯ

ಶ್ರೀಸುರೇಶ್ವರಾಚಾರ್ಯಜ್ಯೇಷ್ಠಶಿಷ್ಯ ವಿದ್ಯಾನಂದಾಚಾರ್ಯಾವಿಚ್ಛಿನ್ನಗುರುಪರಂಪರಾಪ್ರಾಪ್ತ

ಸಕಲನಿಗಮಾಗಮಸಾರಹೃದಯ ಸಾಂಖ್ಯತ್ರಯಪ್ರತಿಪಾದಕ ವೈದಿಕಮಾರ್ಗಪ್ರವರ್ತಕ
ಸರ್ವತಂತ್ರಸ್ವತಂತ್ರಾದಿಬಿರುದಾಂಕಿತ

ವಿದ್ಯಾನಗರಮಹಾರಾಜಧಾನೀವೈಭವಸಿಂಹಾಸನಾಧೀಶ್ವರ ವಿಖ್ಯಾತವ್ಯಾಖ್ಯಾನಸಿಂಹಾಸನಾರೂಢ
ಶ್ರೀಮದ್ರಾಜಾಧಿರಾಜಗುರು

ಶ್ರೀಗೋಕರ್ಣಮಂಡಲಾಚಾರ್ಯ

ಶ್ರೀಮಚ್ಛತಶೃಂಗಪುರವರಾಧೀಶ್ವರ ಶ್ರೀಮಚ್ಛರಾವತೀತೀರವಾಸ ಶ್ರೀಮದ್ರಾಮಚಂದ್ರಾಪುರಮಠಸ್ಥ

ಶ್ರೀಮದ್ರಾಮಚಂದ್ರಚಂದ್ರಮೌಳೀಶ್ವರಪಾದಪದ್ಮಾರಾಧಕ

ಶ್ರೀಮದ್ರಾಘವೇಂದ್ರಭಾರತೀಶ್ರೀಗುರುಕರಕಮಲಸಂಜಾತ

ಶ್ರೀಮದ್ರಾಘವೇಶ್ವರಭಾರತೀಶ್ರೀಸ್ವಾಮಿಭಿಃ

ಅಸ್ಮದತ್ಯಂತಪ್ರಿಯಶಿಷ್ಯರಾದ ಪ್ರಕಾಶಕರು, ಶ್ರೀಭಾರತೀಪ್ರಕಾಶನ

ಇವರಿಗೆ

॥ ಶ್ರೀಮನ್ನಾರಾಯಣಸ್ಮರಣಪುರಸ್ಸರಂ ವಿರಚಿತಾಶಿಷಃ ಸಮುಲ್ಲಸಂತು ॥

॥ ಸಂಪ್ರತಿ ॥

ಅದಾಗಿ, ಶ್ರೀಸವಾರಿಯು ಆರಾಧ್ಯ ಶ್ರೀಸೀತಾರಾಮಚಂದ್ರಚಂದ್ರಮೌಳೀಶ್ವರ ರಾಜರಾಜೇಶ್ವರೀ ದೇವತಾದಿವ್ಯಸನ್ನಿಧಿಯಲ್ಲಿ ಅನುದಿನವೂ ಸಮಸ್ತಜನತೆಯ ಯೋಗಕ್ಷೇಮಗಳನ್ನು ಸಂಪ್ರಾರ್ಥಿಸುತ್ತಾ ಸದ್ಯ ಈ ಮುಕ್ಕಾಮಿನಲ್ಲಿ ಕ್ಷೇಮದಿಂದ ವಸತಿ ಮಾಡಿದೆ.

ರಾಮನಾಮ ಅತ್ಯಂತ ಶ್ರೇಷ್ಠವೂ ಪಾವನಕರವೂ ಆದದ್ದು. ವಿಷ್ಣುವಿನ ಸಹಸ್ರನಾಮದ ಪಠನ–ಅನುಸಂಧಾನಗಳ ಸತ್ಫಲ ಒಂದುರಾಮನಾಮದಿಂದ ಪ್ರಾಪ್ತವಾಗುತ್ತದೆ ಎನ್ನುವುದು ಪರಶಿವನ ಕಥನ. ಅಂತಹ ರಾಮನಾಮದ ಸಹಸ್ರ ಆವರ್ತನೆಗಳು ಅದೆಷ್ಟು ಭಾಗ್ಯಫಲಪ್ರದವಾಗಿರಬಹುದು !

ಅಂತಹ ಪುಣ್ಯಕರವೂ ಶ್ರೇಯಸ್ಕರವೂ ಆದ **ಶ್ರೀರಾಮಸಹಸ್ರನಾಮದ** ಗ್ರಂಥವನ್ನು ಶ್ರೇಷ್ಠವಿದ್ವಾಂಸರೂ ನಮ್ಮ ಪ್ರಿಯಶಿಷ್ಯರೂ ಆದ **ಮಹಾಮಹೋಪಾಧ್ಯಾಯ ವಿದ್ವಾನ್ ಎನ್. ರಂಗನಾಥಶರ್ಮರ** ಮಾರ್ಗದರ್ಶನದಲ್ಲಿ ಹವ್ಯಕಮಹಾಮಂಡಲ–ಧರ್ಮಶಾಖೆಯ ನಿರ್ವಾಹಕತ್ವದಲ್ಲಿ ಶ್ರೀಭಾರತೀಪ್ರಕಾಶನವು ಪ್ರಕಟಪಡಿಸುತ್ತಿರುವುದು ಶ್ಲಾಘನಾರ್ಹ.

ಗ್ರಂಥದ ಸದುಪಯೋಗವನ್ನು ಶ್ರದ್ಧಾಳುಗಳಾದ ಆಸ್ತಿಕಜನತೆ ಪಡೆದುಕೊಳ್ಳಲಿ, ಸರ್ವರಿಗೂ ಶ್ರೀಸೀತಾರಾಮಚಂದ್ರಚಂದ್ರಮೌಳೀಶ್ವರ ರಾಜರಾಜೇಶ್ವರೀ ದೇವತಾಕೃಪೆಯಿಂದ ಶ್ರೇಯಃಪ್ರೇಯಗಳು ಪ್ರಾಪ್ತವಾಗಲಿ ಎಂದು ಹಾರೈಸುತ್ತೇವೆ.

ಇತಿ ಶ್ರೀಮನ್ನಾರಾಯಣಸ್ಮೃತಯಃ

ಮಿತಿ : ಶ್ರೀವಿಕೃತಿ ಸಂವತ್ಸರದ ಫಾಲ್ಗುಣ ಶುಕ್ಲ
ಚತುರ್ಥಿಯು ಮಂಗಳವಾರ

ವಸತಿ: ಶ್ರೀಕ್ಷೇತ್ರ ಭೀಮೇಶ್ವರ, ಸಾಗರ

ಪ್ರಕಾಶಕರ ನುಡಿ

ಪರಮಪೂಜ್ಯ ಶ್ರೀಮಜ್ಜಗದ್ಗುರುಶಂಕರಾಚಾರ್ಯ ಶ್ರೀಶ್ರೀರಾಘವೇಶ್ವರಭಾರತೀ ಮಹಾಸ್ವಾಮಿಗಳವರಿಂದ ಶ್ರೀಕರಾರ್ಚಿತ ದೇವತಾಸನ್ನಿಧಿಗಳಲ್ಲಿ ಹತ್ತುಸಾವಿರ ಮತ್ತು ಹತ್ತುಸಾವಿರದ ಒಂದನೆಯ ಪೂಜಾಸಮರ್ಪಣೆಯು **ವಿರಾಟ್‌ಪೂಜೆಯಾಗಿ** ಅನಾವರಣಗೊಳ್ಳಲಿದೆ. ಆ ಸಂದರ್ಭದಲ್ಲಿ ಶ್ರೀರಾಮದೇವರಿಗೆ ಶ್ರೀರಾಮಸಹಸ್ರನಾಮದ ದಶಸಹಸ್ರಪಠನದ ಮೂಲಕ ಕೋಟಿತುಳಸಿಅರ್ಚನೆಯ ದಿವ್ಯ ಉಪಾಸನೆಯು ಸಮರ್ಪಣೆಗೊಳ್ಳಲಿದೆ. ಇದಕ್ಕಾಗಿ ಶ್ರೀರಾಮಸಹಸ್ರನಾಮದ ಗ್ರಂಥವೊಂದನ್ನು ಸಿದ್ಧಪಡಿಸಲು ಹವ್ಯಕಮಹಾಮಂಡಲದ **ಧರ್ಮಶಾಖೆಗೆ** ಪರಮಪೂಜ್ಯರು ಅಪ್ಪಣೆ ಕೊಡಿಸಿದರು. ಧರ್ಮಶಾಖೆ ಸಿದ್ಧಪಡಿಸಿದ ಗ್ರಂಥ **ಶ್ರೀರಾಮನಾಮಾವಲಿಃ** ಎನ್ನುವ ಹೆಸರಿನಲ್ಲಿ ಪ್ರಕಾಶನಗೊಳ್ಳುತ್ತಿದೆ.

ಶ್ರೀರಾಮನಾಮಾವಲಿಯನ್ನು ಶೋಧಿಸಿ, ಪರಿಷ್ಕರಿಸಿ ನೀಡಿದವರು ಹಿರಿಯ ವಿದ್ವಾಂಸರಾದ **ಮಹಾಮಹೋಪಾಧ್ಯಾಯ ವಿದ್ವಾನ್ ಎನ್. ರಂಗನಾಥಶರ್ಮಾ** ಅವರು. ಆನಂದರಾಮಾಯಣವನ್ನು ಆಕರವನ್ನಾಗಿಸಿಕೊಂಡು ಈ ಸಹಸ್ರನಾಮ ಮತ್ತು ಅಷ್ಟೋತ್ತರಶತನಾಮವನ್ನು ಶ್ರೀಶರ್ಮರು ಆಸ್ತಿಕಲೋಕಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಅಲ್ಲದೆ ಶಾಸ್ತ್ರೀಯವಾದ ಸಮಗ್ರ ಪ್ರಸ್ತಾವನೆಯೊಂದನ್ನು ಸಹ ಅಭಿಮಾನವಿಟ್ಟು ನೀಡಿದ್ದಾರೆ. ಪ್ರಕಾಶನವು ಪೂಜ್ಯ ಶ್ರೀಶರ್ಮರಿಗೆ ನತಮಸ್ತಕವಾಗಿದೆ.

ಗ್ರಂಥಪ್ರಕಾಶನಕ್ಕೆ ಮಾರ್ಗದರ್ಶನವಿತ್ತ ಹಿರಿಯ ವಿದ್ವಾಂಸರಾದ ವಿದ್ವಾನ್ ಅನಂತಶರ್ಮಾ ಭುವನಗಿರಿಯವರಿಗೆ ವಂದನೆಗಳು.

ಹೊತ್ತಿಗೆಯನ್ನು ಸಿದ್ಧಪಡಿಸಿಕೊಟ್ಟ ವೇದಮೂರ್ತಿ ಶೇಷಗಿರಿ ಗಂಗಾಧರಭಟ್ಟ 'ಸಾಕೇತ' ಗುಂಜಗೋಡು ಹಾಗೂ ವಿದ್ವಾನ್ ರಾಮಕೃಷ್ಣಭಟ್ಟ, ಕೂಟೇಲು ಇವರೀರ್ವರಿಗೂ ಅಮೂಲ್ಯವಾದ ಸಲಹೆಗಳನ್ನಿತ್ತ ವಿದ್ವಾನ್ ಜಗದೀಶಶರ್ಮರಿಗೂ ಗ್ರಂಥಪ್ರಕಾಶನದ ಆರ್ಥಿಕ ಹೊಣೆಹೊತ್ತ ವಿರಾಟ್‌ಪೂಜಾ ಸಂಚಾಲನಾ ಸಮಿತಿಗೂ ಪ್ರಕಾಶನ ಕೃತಜ್ಞ. ಮುದ್ರಣ ಮಾಡಿದ ಸ್ಪ್ಯಾನ್ ಪ್ರಿಂಟ್‌ನ ಮಾಲಿಕರಾದ ಶ್ರೀ ಕೆ. ನಾರಾಯಣರವರಿಗೂ ಅನಂತಾನಂತ ಧನ್ಯವಾದಗಳು.

ವಿಶೇಷವಾಗಿ ಗ್ರಂಥಪ್ರಕಾಶನಕ್ಕೆ ಆಶೀರ್ವದಿಸಿದ ಶ್ರೀಶ್ರೀಗಳವರ ಪಾದಪದ್ಮಗಳಿಗೆ ಸಾಷ್ಟಾಂಗಪ್ರಣಾಮಗಳನ್ನು ಸಲ್ಲಿಸುತ್ತ, ಆಸ್ತಿಕಲೋಕದ ಮುಂದೆ ಈ ಪುಸ್ತಕವನ್ನು ಇಡುತ್ತಿದ್ದೇವೆ.

– ಪ್ರಕಾಶಕ

ಪ್ರಸ್ತಾವನೆ

ಕಲ್ಯಾಣೋಲ್ಲಾಸಸೀಮಾ ಕಲಯತು ಕುಶಲಂ ಕಾಲಮೇಘಾಭಿರಾಮಾ
ಕಾಚಿತ್ಸಾಕೇತಧಾಮಾ ಭವಗಹನಗತಿಕ್ಲಾಂತಿಹಾರಿಪ್ರಣಾಮಾ ।
ಸೌಂದರ್ಯಹ್ರೀಣಕಾಮಾ ಧೃತಜನಕಸುತಾಸಾದರಾಪಾಂಗದಾಮಾ
ದಿಕ್ಷು ಪ್ರಖ್ಯಾತಭೂಮಾ ದಿವಿಷದಭಿನುತಾ ದೇವತಾ ರಾಮನಾಮಾ ॥

– ವಿಶ್ವಗುಣಾದರ್ಶ

ತಾತ್ಪರ್ಯ : ಅಯೋಧ್ಯಾನಗರದಲ್ಲಿರುವ ಶ್ರೀರಾಮನೆಂಬ ಹೆಸರಿನ ದೇವತೆಯು ನಮ್ಮೆಲ್ಲರಿಗೂ ಮಂಗಳವನ್ನುಂಟುಮಾಡಲಿ. ಈ ಶ್ರೀರಾಮನು ಕಪ್ಪು ಮೋಡದಂತೆ ಕೃಷ್ಣವರ್ಣದಿಂದ ಸುಂದರನಾಗಿದ್ದಾನೆ. ಈತನನ್ನು ನಮಸ್ಕರಿಸಿದರೆ ಸಂಸಾರದ ಎಲ್ಲ ಕಷ್ಟಗಳೂ ಹೋಗಿಬಿಡುತ್ತವೆ. ಈತನು ಮನ್ಮಥನಿಗಿಂತ ಸುಂದರನಾದವನು. ಪಾರ್ಶ್ವದಲ್ಲಿರುವ ಜನಕಸುತೆಯಾದ ಸೀತೆಯು ಓರೆಗಣ್ಣಿನಿಂದ ಈತನ ಸೌಂದರ್ಯವನ್ನು ನೋಡುತ್ತಿರುತ್ತಾಳೆ. ಶ್ರೀರಾಮನ ಮಹತ್ತ್ವವು ದಿಕ್ಕು ದಿಕ್ಕುಗಳಲ್ಲಿ ಹರಡಿದೆ. ದೇವತೆಗಳೂ ಸಹ ಶ್ರೀರಾಮನನ್ನು ಭಕ್ತಿಯಿಂದ ಸ್ತುತಿಸುತ್ತಾರೆ. ಇಂತಹ ದೇವೋತ್ತಮನಾದ ಶ್ರೀರಾಮನು ನಮಗೆ ಶ್ರೇಯಸ್ಸನ್ನುಂಟುಮಾಡಲಿ.

ಶ್ರೀಮನ್ನಾರಾಯಣನ ದಶಾವತಾರಗಳಲ್ಲಿ ಶ್ರೀರಾಮಾವತಾರವು ಶ್ರೇಷ್ಠವಾದುದು. ಮಾನವನು ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಿರಬೇಕು ಎಂಬುದನ್ನು ಶ್ರೀರಾಮನು ಸ್ಪಷ್ಟವಾಗಿ ತಿಳಿಸಿಕೊಟ್ಟಿದ್ದಾನೆ. ಹೀಗೆ ತಿಳಿಸಿರುವುದು ಕೆಲವು ಕಡೆ ಹೇಳಿಕೆಯಿಂದ, ಕೆಲವು ಕಡೆ ತನ್ನ ಆಚರಣೆಯಿಂದ. ಶ್ರೀಕೃಷ್ಣನಾದರೋ ತನ್ನ ಉಪದೇಶದಿಂದ ಧರ್ಮವನ್ನೂ ಪರಮಾರ್ಥವನ್ನೂ ತಿಳಿಸಿಕೊಟ್ಟಿದ್ದಾನೆ. ಆಚರಣೆ – ಉಪದೇಶಗಳಲ್ಲಿ ಆಚರಣೆಯೇ ಹೆಚ್ಚು ಪ್ರಭಾವಶಾಲಿ ಎಂದು ಗೊತ್ತಾಗುತ್ತದೆ.

ಶ್ರೀಮದ್ರಾಮಾಯಣದ ಆರಂಭದಲ್ಲಿಯೇ ವಾಲ್ಮೀಕಿಮುನಿಗಳು ನಾರದ ಮಹರ್ಷಿಗಳನ್ನು ಕುರಿತು ಒಂದು ಪ್ರಶ್ನೆಯನ್ನು ಹಾಕುತ್ತಾರೆ. "ನಾರದ ಮುನಿಗಳೇ, ಈ ಸದ್ಗುಣಗಳು ಲೋಕದಲ್ಲಿ ಯಾರಲ್ಲುಂಟು? ತ್ರಿಲೋಕಸಂಚಾರಿಗಳಾದ ನೀವು ಹೇಳಬೇಕು" ಎಂದು ನುಡಿದು ಹದಿನಾರು ಸದ್ಗುಣಗಳನ್ನು ಪಟ್ಟಿ ಮಾಡಿ ಹೇಳುತ್ತಾರೆ. "ಧರ್ಮನಿಷ್ಠೆ, ಕೃತಜ್ಞತೆ, ಕಾರುಣ್ಯ, ಜನೋಪಕಾರ, ಇತ್ಯಾದಿ ಹದಿನಾರು ಗುಣಗಳ

ಪಟ್ಟಿಯಿದು. ಅಲ್ಲದೆ ಆತನು ಮಹಾಪರಾಕ್ರಮಿಯೂ ಆಗಿರಬೇಕು"! ಎಂದು. ಆಗ ನಾರದರು "ವಾಲ್ಮೀಕಿ ಮುನಿಗಳೇ, ನೀವು ಬಹಳ ಸದ್ಗುಣಗಳ ಪಟ್ಟಿಯನ್ನೇ ಮಾಡಿದ್ದೀರಿ. ಇಷ್ಟು ಗುಣಗಳುಳ್ಳ ಒಬ್ಬ ಮನುಷ್ಯನು ದೊರಕುವುದು ಕಷ್ಟ. ಆದರೂ ಆಲೋಚಿಸಿ ಹೇಳುವುದಾದರೆ ದಶರಥರಾಜನ ಮಗನಾದ ಶ್ರೀರಾಮನೊಬ್ಬ ಇಂತಹ ಗುಣಗಳುಳ್ಳವನಾಗಿದ್ದಾನೆ" ಎಂದು ಹೇಳುತ್ತಾರೆ. ಈ ಗುಣಗಳೆಲ್ಲವೂ ಶ್ರೀರಾಮನಲ್ಲಿ ಇವೆಯೆಂಬುದನ್ನು ತೋರಿಸುವುದಕ್ಕಾಗಿ ಶ್ರೀಮದ್ರಾಮಾಯಣವನ್ನೇ ವಾಲ್ಮೀಕಿಮುನಿಗಳು ರಚಿಸಿದರು.

ಶ್ರೀರಾಮನ ಕೆಲವು ನಡತೆಗಳನ್ನು ವೀಕ್ಷಿಸಬಹುದು : ಈತನು ತನ್ನ ತಾಯಿ ತಂದೆಯರಿಗೆ ಅತ್ಯಂತ ವಿಧೇಯನಾಗಿ ನಡೆದುಕೊಳ್ಳುತ್ತಾನೆ. ಕೈಕೇಯಿಯು ತನ್ನ ಮಲತಾಯಿಯಾದರೂ ಸಾಕ್ಷಾತ್ ತಾಯಿಯೆಂಬ ಭಾವನೆಯಿಂದಲೇ ವರ್ತಿಸುತ್ತಾನೆ. ಸಾಕ್ಷಾತ್ ತಾಯಿಯಾದ ಕೌಸಲ್ಯೆಗೂ ಕೈಕೇಯಿಗೂ ಆತನ ದೃಷ್ಟಿಯಲ್ಲಿ ಭೇದವೇ ಇಲ್ಲ. ತನ್ನ ವನವಾಸಕ್ಕೆ, ನಾನಾ ಬಗೆಯ ಕಷ್ಟಗಳಿಗೆ ಕೈಕೇಯಿಯು ಕಾರಣಳಾಗಿದ್ದರೂ ಅವಳನ್ನು ದೂಷಿಸುವುದಿಲ್ಲ. ಅವಳು ತಂದೆಯ ಪತ್ನಿಯಾದ್ದರಿಂದ ಪೂಜ್ಯಳೆಂದೇ ಅವನ ಭಾವನೆ. ತನ್ನ ವನವಾಸದ ವರವನ್ನು ಅವಳು ದಶರಥನಿಂದ ಕೇಳಿಕೊಳ್ಳುವುದಕ್ಕೆ ಮೊದಲು ಆತನು ಅವಳಲ್ಲಿ ತಾಯಿಯಂತೆಯೇ ನಡೆದುಕೊಂಡಿದ್ದಾನೆ. ಇಷ್ಟು ಮಾತೃಭಕ್ತಿಯಿಂದ ನಡೆದುಕೊಂಡರೂ ತನ್ನನ್ನು ಕಾಡಿಗೆ ದೂಡುತ್ತಾಳೆಂಬ ಚಿಂತೆಯು ಲೇಶವಾಗಿಯೂ ಅವನ ಮನಸ್ಸಿನಲ್ಲಿ ಮೂಡುವುದಿಲ್ಲ. ಇನ್ನು ದಶರಥನಲ್ಲಿ ಸಹ ಆತನ ಭಕ್ತಿ ಗೌರವಗಳು ಒಂದೇ ವಿಧವಾಗಿದ್ದವೇ ಹೊರತು ಕಡೆಯವರೆಗೂ ಬದಲಾಗಲಿಲ್ಲ. ಭರತನು ಕಾಡಿಗೆ ಬಂದು ದಶರಥನ ಸಾವನ್ನು ಹೇಳಿದಾಗ ಶ್ರೀರಾಮನ ದುಃಖಕ್ಕೆ ಮೇರೆಯೇ ಇರುವುದಿಲ್ಲ. ಅವನು ಸೀತಾಲಕ್ಷ್ಮಣರಿಗೆ ತಂದೆಯ ಸಾವನ್ನು ಹೇಳಿ ಅಳುತ್ತಲೇ ದಶರಥನ ಉತ್ತರಕ್ರಿಯೆಯನ್ನು ಕಾಡಿನಲ್ಲಿ ಮಾಡುತ್ತಾನೆ. ದಶರಥನನ್ನು ಹೊಗಳಿ ಹೊಗಳಿ ವಿಲಪಿಸುತ್ತಾನೆ. ತಮ್ಮನಾದ ಲಕ್ಷ್ಮಣನ ವಿಷಯದಲ್ಲಿ ಆತನ ಪ್ರೀತಿಕಾರುಣ್ಯಗಳು ಅತಿಶಯವಾದವು. ಇಂದ್ರಜಿತುವಿನ ಅಸ್ತ್ರದಿಂದ ಲಕ್ಷ್ಮಣನು ಮೂರ್ಛೆಹೋದಾಗ ಆತನನ್ನು ತಬ್ಬಿಕೊಂಡು ಶ್ರೀರಾಮನು ಗೋಳಾಡುವುದು ನಮಗೂ ದುಃಖವನ್ನು ತರಿಸುತ್ತದೆ. ಮಡದಿಯಾದ ಸೀತೆಯ ವಿಷಯದಲ್ಲಿ ಆತನಿಗಿದ್ದ ಪ್ರೀತಿ ಅತಿಶಯವಾದುದು. ಅವಳು ಶ್ರೀರಾಮನೊಡನೆ ಕಾಡಿಗೆ ಬರುತ್ತೇನೆಂದು ಹಠ ಹಿಡಿಯುತ್ತಾಳೆ. ಆಗ ರಾಘವನು ಅವಳನ್ನು ಸಮಾಧಾನಪಡಿಸಿ ಅಯೋಧ್ಯೆಯಲ್ಲಿಯೇ ಉಳಿಯುವಂತೆ ಮತ್ತೆ ಮತ್ತೆ ಹೇಳಿ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಕಡೆಗೆ ಸೀತೆಯು

ಗೋಳೋ ಎನ್ನುತ್ತ ಪತಿಯನ್ನು ಅಪ್ಪಿಕೊಂಡು ಅಳುತ್ತಾ ತಾನೂ ಅಡವಿಗೆ ಬರುತ್ತೇನೆಂದು ಹಠ ಹಿಡಿದಾಗ ಮಾರ್ಗಾಂತರವಿಲ್ಲದೆ ಒಪ್ಪಿಕೊಳ್ಳುತ್ತಾನೆ. ಕಾಡಿನಲ್ಲಿದ್ದಾಗ ಅವಳಿಗೆ ಕಷ್ಟವಾಗದಂತೆ ಬಹುವಿಧದಲ್ಲಿ ನೋಡಿಕೊಳ್ಳುತ್ತಾನೆ. ರಾವಣನು ಮಾರೀಚನ ಮೂಲಕ ಸೀತೆಯನ್ನು ಅಪಹರಿಸಿಕೊಂಡು ಲಂಕೆಗೆ ಹೋದಾಗ ಶ್ರೀರಾಮನು ಅವಳಿಗಾಗಿ ಹುಚ್ಚನಂತೆ ಮಾತಾಡುತ್ತಾ ಕಾಡಿನಲ್ಲಿ ಅಲೆಯುತ್ತಾನೆ. ಸೀತೆಗಾಗಿ ಅವನು ಹಲುಬುವುದು ಓದುಗರಿಗೂ ಅಳುವನ್ನು ತರಿಸುತ್ತದೆ. ಲಕ್ಷ್ಮಣನು ಹೇಳುವ ಸಮಾಧಾನವು ಅವನಿಗೆ ನಾಟುವುದೇ ಇಲ್ಲ. ಪತ್ನಿಗಾಗಿ ಅವನಿಗಾದಂತಹ ತೀವ್ರವಾದ ದುಃಖ ಸಂವೇದನೆಗಳು ನಮ್ಮ ಇತಿಹಾಸ, ಪುರಾಣ, ಕಾವ್ಯಗಳಲ್ಲಿ ಇನ್ನೆಲ್ಲಿಯೂ ಲಭಿಸುವುದಿಲ್ಲ. ಅವಳನ್ನು ಹುಡುಕುತ್ತಾ ಸಮುದ್ರದ ಸಮೀಪಕ್ಕೆ ಬಂದಾಗ ಲಕ್ಷ್ಮಣನೊಡನೆ – 'ಲಕ್ಷ್ಮಣ ! ಸೀತೆಯು ದೊರಕಲಿಲ್ಲ. ನಾನು ಈ ವಿರಹ ದುಃಖವನ್ನು ತಡೆಯಲಾರೆ. ಆದ್ದರಿಂದ ನಿನ್ನನ್ನು ಬಿಟ್ಟು ಈ ಸಮುದ್ರದಲ್ಲಿ ಮುಳುಗಿ ಬಿಡುತ್ತೇನೆ' ಎನ್ನುತ್ತಾನೆ. ಈ ಪರಿಯಲ್ಲಿ ಶೋಕತಪ್ತನಾದ ಶ್ರೀರಾಮನ ಗೋಳಾಟವು ನಮ್ಮ ಹೃದಯವನ್ನೇ ಕಲಕಿಬಿಡುತ್ತದೆ.

ಹನುಮಂತನು ಶ್ರೀರಾಮನ **ಅಂತರಂಗಭಕ್ತ** ಎಂಬುದು ಪ್ರಸಿದ್ಧವಾದುದು. ಅರಣ್ಯದಲ್ಲಿ ಋಷ್ಯಮೂಕಪರ್ವತದ ಎಡೆಯಲ್ಲಿ ಹನುಮಂತನಿಗೆ ರಾಮಲಕ್ಷ್ಮಣರ ಭೇಟಿಯಾಗುತ್ತದೆ. ಇವರು ಯಾರೆಂದು ತಿಳಿದುಬರುವುದಕ್ಕಾಗಿ ಸುಗ್ರೀವನು ಹನುಮಂತನನ್ನು ಅವರ ಬಳಿಗೆ ಕಳುಹಿಸುತ್ತಾನೆ. ಹನುಮಂತನು ಒಬ್ಬ ವಟುವಿನ ವೇಷದಲ್ಲಿ ಬಂದು ಈ ರಾಮಲಕ್ಷ್ಮಣರನ್ನು ನಯ-ವಿನಯಗಳಿಂದ ನೀವು ಯಾರೆಂದು ವಿಚಾರಿಸಿದಾಗ ಲಕ್ಷ್ಮಣನು ತಮ್ಮ ಸುದ್ದಿಯನ್ನು ಹೇಳುತ್ತಾನೆ. ಆಗ ಹನುಮಂತನು ತಾನು ಯಾರೆಂದು ಬಣ್ಣಿಸುತ್ತಾನೆ. ಆತನ ಮಾತುಗಳನ್ನು ಕೇಳಿ ಶ್ರೀರಾಮನು ಮೆಚ್ಚುಗೆಯಿಂದ ತಲೆದೂಗುತ್ತಾನೆ ಮತ್ತು

ನೂನಂ ವ್ಯಾಕರಣಂ ಕೃತ್ಸ್ನಮನೇನ ಬಹುಧಾ ಶ್ರುತಮ್
ಬಹುವ್ಯಾಹರತಾಽನೇನ ನ ಕಿಂಚಿದಪಶಬ್ದಿತಮ್

ಎಂದು ಲಕ್ಷ್ಮಣನಿಗೆ ಹೇಳುತ್ತಾನೆ. "ಈತನು ನಿಶ್ಚಯವಾಗಿಯೂ ವ್ಯಾಕರಣಶಾಸ್ತ್ರವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದ್ದಾನೆ. ಇಷ್ಟು ಮಾತಾಡಿದರೂ ಒಂದೇ ಒಂದು ಅಪಶಬ್ದವನ್ನು ನುಡಿಯಲಿಲ್ಲ !" ಎಂದು ನುಡಿದು ಹನುಮಂತನಲ್ಲಿ ತನ್ನ ಮೆಚ್ಚುಗೆಯನ್ನು ಸೂಚಿಸುತ್ತಾನೆ.

ಇದು ರಾಮ – ಹನುಮಂತರ ಮೊದಲ ಭೇಟಿ. ಹನುಮಂತನೂ ಸಹ ಶ್ರೀರಾಮನ ಸೌಂದರ್ಯ, ದೊಡ್ಡತನ, ಗಾಂಭೀರ್ಯ, ಮುಂತಾದ ಗುಣಗಳನ್ನು ನೋಡಿ

ಮೆಚ್ಚಿಕೊಳ್ಳುತ್ತಾನೆ. ಹೀಗೆ ಸಂಭವಿಸಿದ ಮೈತ್ರಿಯು ಚಿರಂತನವಾಗಿ ನಿಂತುಬಿಡುತ್ತದೆ. ಶ್ರೀರಾಮನು ತನ್ನ ಸ್ವಾಮಿಯೆಂದು ತಾನು ಅವನ ಭಕ್ತನಾದ ದಾಸನೆಂದು ಹನುಮಂತನಿಗೆ ದೃಢವಾದ ಭಾವನೆ ಹುಟ್ಟುತ್ತದೆ. ಹನುಮಂತನು ಸೀತಾದೇವಿಯನ್ನು ಹುಡುಕುತ್ತಾ ಲಂಕೆಗೆ ಹೋಗಿ ಅಶೋಕವನವನ್ನು ಧ್ವಂಸಗೊಳಿಸಿದಾಗ **ದಾಸೋಽಹಂ ಕೋಸಲೇಂದ್ರಸ್ಯ** ಎಂದು ಹೇಳಿಕೊಳ್ಳುತ್ತಾನೆ. ಈತನು ಶ್ರೀರಾಮನಿಗೆ ಹೇಗೆ ದಾಸನಾದ? ಆತನ ಮಹಿಮಾನ್ವಿತ ಗುಣಗಳಿಂದಲ್ಲವೇ? ಶ್ರೀರಾಮನ ವ್ಯಕ್ತಿತ್ವವು ಎಂತಹದೆಂಬುದನ್ನು ಎಂತಹ ಭಾವನೆಯನ್ನು ಹುಟ್ಟಿಸುವುದೆಂಬುದನ್ನು ಇದರಿಂದ ಕಾಣಬಹುದು.

ಅನಂತರ ಸೀತಾದೇವಿಯನ್ನು ನೋಡಿ ಮಾತನಾಡಿ ಸಮುದ್ರವನ್ನು ಲಂಘಿಸಿ ಹಿಂದಕ್ಕೆ ಬಂದು ತನ್ನ ಕಾರ್ಯವೆಲ್ಲವನ್ನೂ ಶ್ರೀರಾಮನಿಗೆ ತಿಳಿಸುತ್ತಾನೆ. ಸೀತಾದೇವಿಯು ಲಂಕೆಯಲ್ಲಿದ್ದಾಳೆಂಬುದು ದೃಢವಾಯಿತು. ಆಗ ಶ್ರೀರಾಮನು ಪರಮಸಂತೋಷದಿಂದ "ಇಂತಹ ಮಹಾಕಾರ್ಯವನ್ನು ಹನುಮಂತನಲ್ಲದೆ ಇನ್ನು ಯಾರು ಮಾಡಿಯಾರು? ಬಹಳ ಕಷ್ಟದಲ್ಲಿ ಸಿಕ್ಕಿರುವ ನಾನು ಈ ಮಹಾತ್ಮನಿಗೆ ಯಾವ ಪಾರಿತೋಷಕವನ್ನು ಕೊಡಲಿ? ಈ ಆಲಿಂಗನವನ್ನು ಮಾತ್ರ ಕೊಡಬಲ್ಲೆ" ಎಂದು ಹೇಳಿ ಆನಂದದಿಂದ ಹನುಮಂತನನ್ನು ಗಟ್ಟಿಯಾಗಿ ಅಪ್ಪಿಕೊಳ್ಳುತ್ತಾನೆ. ಹನುಮಂತನಿಗಾದರೋ ಇದಕ್ಕಿಂತ ಹೆಚ್ಚಾದ ಇನ್ನು ಯಾವ ವರ ಬೇಕಾಗಿತ್ತು? ಈ ರೀತಿಯಲ್ಲಿ ಕೃತಜ್ಞತೆಯ ಪಾಠವನ್ನು ಶ್ರೀರಾಮನು ನಮಗೆ ಕಲಿಸಿದ್ದಾನೆ.

ಯುದ್ಧದಲ್ಲಿ ರಾವಣನು ಹತನಾದನು. ಆಗ ರಾವಣನ ಉತ್ತರಕ್ರಿಯೆಯನ್ನು ಯಾರು ಮಾಡಬೇಕು? ಅವನ ಪುತ್ರರಲ್ಲಿ ಅಥವಾ ಬಾಂಧವರಲ್ಲಿ ಸೋದರನಾದ ವಿಭೀಷಣನೊಬ್ಬನೇ ಕೊನೆಗೆ ಉಳಿದವನು. ಶ್ರೀರಾಮನು ವಿಭೀಷಣನನ್ನು ಕರೆದು "ವಿಭೀಷಣ ! ಈತನ ಉತ್ತರಕ್ರಿಯೆಯನ್ನು ಮಾಡು" ಎಂದು ಆದೇಶಿಸುತ್ತಾನೆ. ವಿಭೀಷಣನು ದುಷ್ಟನಾದ ರಾವಣನ ಉತ್ತರಕ್ರಿಯೆಯನ್ನು ಮಾಡಲು ಒಪ್ಪುವುದಿಲ್ಲ. ಆಗ ಶ್ರೀರಾಮನು ಹೇಳುವ ಈ ಮಾತು ಸ್ಮರಣೀಯವಾದುದು –

ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಮ್
ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾ ತವ

"ವಿಭೀಷಣ ! ವೈರವೆಂಬುದು ವೈರಿಯು ಸಾಯುವವರೆಗೆ ಮಾತ್ರ. ನಮ್ಮ ಉದ್ದೇಶವು ಪೂರ್ಣವಾಗಿ ಸಿದ್ಧಿಸಿತು. ಈಗ ಈತನಿಗೆ ಉತ್ತರಕ್ರಿಯಾದಿಗಳನ್ನು ಮಾಡು. ನಿನಗೆ ಈತನು ಹೇಗೆ ಸಹೋದರನೋ ಹಾಗೆಯೇ ನನಗೂ ಸಹೋದರ!".

'ವಿಭೀಷಣ ! ನೀನು ರಾವಣನಿಗೆ ಉತ್ತರಕ್ರಿಯೆಗಳನ್ನು ಮಾಡದಿದ್ದರೆ ನಾನು ಮಾಡುತ್ತೇನೆ' ಎಂದು ಅಭಿಪ್ರಾಯ. ಇಂತಹ ಉದಾತ್ತ ಗುಣವು ಶ್ರೀರಾಮನಲ್ಲಲ್ಲದೆ ಇನ್ನೆಲ್ಲಿ ಇದ್ದೀತು?

ರಾಜರು ಶತ್ರುರಾಜರನ್ನು ಜಯಿಸಿದಾಗ ಅವರ ರಾಜ್ಯಗಳನ್ನು ತಮ್ಮ ರಾಜ್ಯದೊಂದಿಗೆ ಸೇರಿಸಿ ಬಿಡುವುದು ಹಿಂದಿನಿಂದ ಬಂದ ಸಂಪ್ರದಾಯವಾಗಿರುತ್ತದೆ. ಆದರೆ ಶ್ರೀರಾಮನ ಘನತೆಯನ್ನು ನೋಡಿ ! ವಾಲಿಯನ್ನು ಅವನು ಸಂಹರಿಸಿದಾಗ ಅವನ ರಾಜ್ಯವನ್ನು ತನ್ನ ವಶಕ್ಕೆ ತೆಗೆದುಕೊಳ್ಳದೇ ಸುಗ್ರೀವನು ರಾಜನೆಂದು ಪಟ್ಟಾಭಿಷೇಕ ಮಾಡಿಸುತ್ತಾನೆ. ರಾವಣನನ್ನು ಕೊಂದಮೇಲೆ ಲಂಕಾದ್ವೀಪವನ್ನು ಕೋಸಲರಾಜ್ಯದೊಂದಿಗೆ ಸೇರಿಸಿಕೊಳ್ಳಬಹುದಾಗಿತ್ತು. ಆದರೆ ಲಂಕೆಯಲ್ಲಿ ವಿಭೀಷಣನಿಗೆ ಪಟ್ಟಾಭಿಷೇಕವನ್ನು ತಾನೇ ಮಾಡಿಸಿ ಹಿಂದಿರುಗುತ್ತಾನೆ. ವಿಭೀಷಣನು ಕೃತಜ್ಞತೆಯಿಂದ ಶ್ರೀರಾಮನಿಗೆ ಯಥೋಚಿತವಾದ ಸತ್ಕಾರವನ್ನು ಮಾಡಲು ಬಯಸುತ್ತಾನೆ. ಆದರೆ ಯಾವ ಸತ್ಕಾರವನ್ನೂ ಸ್ವೀಕರಿಸದೆ "ನಾನು ಮೊದಲು ಭರತನನ್ನು ನೋಡಬೇಕಾಗಿದೆ. ನನಗಾಗಿ ನನ್ನ ತಮ್ಮನು ಬಹಳ ದುಃಖಪಡುತ್ತಿದ್ದಾನೆ" ಎಂದು ಹೇಳಿ ಪುಷ್ಪಕವಿಮಾನವನ್ನೇರಿ ಅಯೋಧ್ಯೆಗೆ ಹೊರಟುಬಿಡುತ್ತಾನೆ. ಇದು ಶ್ರೀರಾಮನ ಘನತೆ.

ಲಂಕೆಯಿಂದ ಪುಷ್ಪಕವಿಮಾನದಲ್ಲಿ ಸೀತೆಯೊಡನೆ ಹಿಂದಿರುಗುವಾಗ ಹನುಮಂತನೂ ಬಂದಿದ್ದನು. ಭರತನು ನಂದಿಗ್ರಾಮದಲ್ಲಿ ಶ್ರೀರಾಮನ ಆಗಮನವನ್ನು ನಿರೀಕ್ಷಿಸುತ್ತಿದ್ದನು. ಆಗ ಆ ವಿಮಾನವನ್ನು ದೂರದಲ್ಲಿ ಕೆಳಗಿಳಿಸಿ ಶ್ರೀರಾಮನು ಹನುಮಂತನಿಗೆ "ಹನುಮಂತ ! ನೀನು ಮುಂದೆ ಹೋಗಿ ಭರತನಿಗೆ ನನ್ನ ಆಗಮನವನ್ನು ತಿಳಿಸು. ಆಗ ಅವನ ಮುಖಭಾವವನ್ನು ವೀಕ್ಷಿಸುತ್ತಿರು. ನನ್ನ ಬರುವಿಕೆಯಿಂದ ಅವನಿಗೆ ಸಂತೋಷವಾಯಿತೇ ಅಥವಾ ವಿಷಾದವಾಯಿತೇ ಎಂಬುದನ್ನು ಭರತನ ಮುಖಭಾವದಿಂದ ತಿಳಿದು ಬಂದು ನನಗೆ ಹೇಳು. ಹದಿನಾಲ್ಕು ವರುಷ ರಾಜ್ಯವನ್ನಾಳಿದಾಗ ಯಾವನಿಗೆ ಅದನ್ನು ಬಿಟ್ಟುಕೊಡಲು ಇಚ್ಛೆಯಾದೀತು? ಭರತನಿಗೆ ನಾನು ಬಂದದ್ದರಿಂದ ಸ್ವಲ್ಪವಾದರೂ ವಿಷಾದವಾಗಿದ್ದರೆ ನನಗೆ ಹೇಳು. ನಾನು ಇಲ್ಲಿಂದಲೇ ಮತ್ತೆ ವನವಾಸಕ್ಕೆ ಹೋಗಿಬಿಡುತ್ತೇನೆ. ಭರತನೇ ಕೋಸಲರಾಜ್ಯವನ್ನು ಆಳಿಕೊಂಡಿರಲಿ" ಎಂದು ಹೇಳುತ್ತಾನೆ. ಶ್ರೀರಾಮನ ಸೂಕ್ಷ್ಮದೃಷ್ಟಿ, ಭ್ರಾತೃವಾತ್ಸಲ್ಯ ಮುಂತಾದ ಸದ್ಗುಣಗಳನ್ನಿಲ್ಲಿ ಕಾಣಬಹುದು. ಯಾರು ಹೀಗೆ ಹೇಳಿಯಾರು? ಈ ಪರಿಯಾದ ಮಹಿಮಾನ್ವಿತ ಸದ್ಗುಣಗಳನ್ನು ಶ್ರೀರಾಮನಲ್ಲಿ ಮಾತ್ರ ಕಾಣಬಹುದು.

ಶ್ರೀರಾಮನ ಒಂದು ವಿಶೇಷವಾದ ಅಪೂರ್ವ ಗುಣವನ್ನಿಲ್ಲಿ ಹೇಳಬೇಕಾಗಿದೆ. ಅದು ಏಕಪತ್ನೀವ್ರತ. ಅವನ ತಂದೆ ದಶರಥನು ಅನೇಕ ಪತ್ನಿಯರನ್ನು ಮದುವೆಯಾಗಿದ್ದುದು

ಗೊತ್ತಿದೆ. ಆದರೆ ಶ್ರೀರಾಮನು ಮಾತ್ರ ಬಾಯಲ್ಲಿ ಹೇಳದಿದ್ದರೂ ನಡತೆಯಲ್ಲಿ ಅದನ್ನು ತೋರಿಸಿಕೊಟ್ಟಿದ್ದಾನೆ. ವನದಲ್ಲಿ ಸೀತಾದೇವಿಯನ್ನು ರಾವಣನು ಅಪಹರಿಸಿದನಷ್ಟೆ. ಅನಂತರ ಅವಳನ್ನು ಹುಡುಕಿ ತರುವುದಕ್ಕಾಗಿ ಅವನು ಪಟ್ಟ ಶ್ರಮವೆಷ್ಟು? ಸಮುದ್ರಕ್ಕೇ ಸೇತುವೆಯನ್ನು ಕಟ್ಟಿ ರಾವಣನನ್ನು ಮರ್ದಿಸಿ ಸೀತಾದೇವಿಯನ್ನು ಕರೆತಂದನು. ಇನ್ನೊಬ್ಬನಾದರೆ ಆ ಮಹಾಕಾರ್ಯಕ್ಕೆ ಕೈ ಹಾಕದೆ ಇನ್ನೊಬ್ಬಳನ್ನು ಮದುವೆಯಾಗುತ್ತಿದ್ದ. ಎರಡನೆಯ ಸಲ ಪ್ರಜೆಗಳು ಸೀತಾದೇವಿಯನ್ನು ಅನುಚಿತವಾಗಿ ದೂಷಿಸಿದರಷ್ಟೆ. ರಾಜಧರ್ಮಕ್ಕೆ ಅಂತಹವಳನ್ನು ಕಟ್ಟಿಕೊಂಡಿರುವುದು ಅಯೋಗ್ಯವೆನಿಸಿ ಶ್ರೀರಾಮನು ಸೀತಾದೇವಿಯನ್ನು ಪರಿತ್ಯಜಿಸಿದನು. ಆದರೆ ಇನ್ನೊಬ್ಬಳನ್ನು ಮದುವೆಯಾಗಲಿಲ್ಲ. ಕಡೆಗೆ ಭೂದೇವಿಯು ಸೀತಾದೇವಿಯನ್ನು ತನ್ನ ಗರ್ಭದಲ್ಲಿ ಸೇರಿಸಿಕೊಂಡಾಗ ಶ್ರೀರಾಮನು ಅತ್ಯಂತ ವಿಷಣ್ಣನಾದನು. ಮಕ್ಕಳಾದ ಲವ-ಕುಶರೊಡನೆ ಅರಮನೆಗೆ ಹೋದನೇ ಹೊರತು ಇನ್ನೊಬ್ಬಳನ್ನು ಮದುವೆಯಾಗಲಿಲ್ಲ. ತಮ್ಮಂದಿರಾದ ಭರತ, ಲಕ್ಷ್ಮಣ, ಶತ್ರುಘ್ನರು ತಮ್ಮ ಪತ್ನಿಯರೊಡನೆ ಪುತ್ರಸಹಿತರಾಗಿ ಇದ್ದರೂ ಆತನು ಮನಸ್ಸು ಬದಲಾಯಿಸಲಿಲ್ಲ. ಮುಂದೆ ಗೃಹಸ್ಥನು ಮಾಡಬೇಕಾದ ಒಂದು ಯಾಗವನ್ನು ಮಾಡಿದನು. ಆಗ ಋಷಿಗಳ ಆದೇಶದಂತೆ ಸುವರ್ಣ ನಿರ್ಮಿತ ಸೀತಾವಿಗ್ರಹವನ್ನು ಬಳಿಯಲ್ಲಿ ಇಟ್ಟುಕೊಂಡನೇ ಹೊರತು ಇನ್ನೊಬ್ಬ ಹುಡುಗಿಯನ್ನು ಕಣ್ಣೆತ್ತಿಯೂ ನೋಡಲಿಲ್ಲ. ಕಡೆಯವರೆಗೂ ಅವನು ಏಕಾಕಿಯಾಗಿ ಜೀವಿಸಿದನೇ ಹೊರತು ಇನ್ನೊಬ್ಬಳನ್ನು ಮದುವೆಯಾಗಲಿಲ್ಲ. ಇದು ಆದರ್ಶವಾದ ಏಕಪತ್ನೀವ್ರತ. ಇಂತಹ ಮಹಾಗುಣಗಳನ್ನು ಇತಿಹಾಸ ಪುರಾಣಗಳಲ್ಲಿ ಬರುವ ಯಾವ ವ್ಯಕ್ತಿಯಲ್ಲಿಯೂ ನಾವು ಕಾಣಲಾರೆವು.

ರಾಮೋ ರಾಮೋ ರಾಮ ಇತಿ ಪ್ರಜಾನಾಮಭವನ್ ಕಥಾಃ

ರಾಮಭೂತಂ ಜಗದಭೂತ್ ರಾಮೇ ರಾಜ್ಯಂ ಪ್ರಶಾಸತಿ

ತಾತ್ಪರ್ಯ : ಶ್ರೀರಾಮನು ರಾಜ್ಯಭಾರವನ್ನು ಮಾಡುತ್ತಿರಲಾಗಿ ಪ್ರಜೆಗಳೆಲ್ಲರೂ ಆತನನ್ನು ಕೊಂಡಾಡುತ್ತಿದ್ದರು. ಎಲ್ಲೆಲ್ಲಿಯೂ ಶ್ರೀರಾಮನ ಹೆಸರೇ ಪ್ರಸ್ತುತವಾಗುತ್ತಿತ್ತು. ಆಹಾ ! ನಮ್ಮ ರಾಜ ಶ್ರೀರಾಮ. ಇವನ ಆಳ್ವಿಕೆಯಲ್ಲಿ ಎಲ್ಲರೂ ಸುಖವಾಗಿದ್ದೇವೆ. ಸುಳ್ಳು, ಕಳ್ಳತನ ಇವೇ ಮೊದಲಾದವುಗಳಿಗೆ ಅವಕಾಶವೇ ಇಲ್ಲ. ನಮಗೆ ಯಾವ ಕೊರತೆಯೂ ಆಗುತ್ತಿಲ್ಲ. ರಾಜ ಎಂದರೆ ಹೀಗಿರಬೇಕು. ರಾಮರಾಜ್ಯ ಇದು ಎಂದು ಹೇಳಿಕೊಂಡು ಸಕಲರೂ ಶ್ರೀರಾಮನನ್ನೂ ಅವನ ಆಳ್ವಿಕೆಯ ವಿಧಾನವನ್ನೂ ಹೊಗಳಿ ಹಾಡುತ್ತಿದ್ದರು. ಆಹಾ ! ರಾಮ ! ರಾಮ ! ರಾಮ ! ಈ ರೀತಿಯಲ್ಲಿ ಜಗತ್ತೆಲ್ಲವೂ ರಾಮಶಬ್ದದಿಂದಲೇ ತುಂಬಿಹೋಯಿತು.

ಶ್ರೀರಾಮನಾಮಸ್ಮರಣೆಯನ್ನು ಮಾಡುತ್ತಾ ಅವನ ಸೇವೆಯಲ್ಲಿಯೇ ನಿರತನಾದ ಹನುಮಂತನು ಧನ್ಯ. ಈತನು ವಾನರವಂಶದಲ್ಲಿ ಜನಿಸಿದವನಾದರೂ

ದೇವತಾಸ್ವರೂಪನಾಗಿ ಭಾರತೀಯರಿಗೆ ಪೂಜ್ಯನಾದವನು. ಭರತಖಂಡದಲ್ಲಿ ರಾಮೇಶ್ವರದಿಂದ ಕಾಶ್ಮೀರದವರೆಗೆ ಹೋದರೆ ಹನುಮಂತನ ದೇವಸ್ಥಾನಗಳು ಹಳ್ಳಿ ಹಳ್ಳಿಗಳಲ್ಲಿಯೂ ದೊರೆಯುತ್ತವೆ. ಆತನ ಭಕ್ತರು ಬಹುಸಂಖ್ಯೆಯಲ್ಲಿದ್ದಾರೆ. ಹನುಮಂತನನ್ನು ದೇವತಾಸ್ವರೂಪನೆಂದು ಪೂಜಿಸುತ್ತಾರೆ. ತಮ್ಮ ಹೆಸರನ್ನೂ ಸಹ ಹನುಮಂತನೆಂದು ಇಟ್ಟುಕೊಳ್ಳುತ್ತಾರೆ. ಹನುಮಂತನಿಲ್ಲದ ಶ್ರೀರಾಮದೇವಸ್ಥಾನವೇ ಇರುವುದಿಲ್ಲ. ಶ್ರೀರಾಮನಾದರೋ ಶ್ರೀಮನ್ನಾರಾಯಣನ ಅವತಾರವೆಂದು ಜನರು ಭಾವಿಸಿದ್ದಾರೆ. ಅವರೇ ವಾನರನಾದ ಹನುಮಂತನನ್ನೂ ಸಹ ದೇವತಾಪಟ್ಟಕ್ಕೆ ಏರಿಸಿದ್ದಾರೆ. ಹನುಮಂತನು ರಾಮನಾಮದ ಮಹಿಮೆಯಿಂದಲೇ ದೇವತಾಸ್ವರೂಪನಾದನು. ಆದ್ದರಿಂದ ಶ್ರೀರಾಮನ ಮಹಿಮೆ ಎಷ್ಟೆಂಬುದು ಗೊತ್ತಾಗುತ್ತದೆ.

ಹೀಗೆಯೇ ಅರಣ್ಯಕಾಂಡದಲ್ಲಿ ಶಬರಿಯೆಂಬ ವೃದ್ಧೆ ಶ್ರೀರಾಮನನ್ನು ಜಪಿಸುತ್ತಾ ಆತನ ಅನುಗ್ರಹದಿಂದ ಸ್ವರ್ಗವನ್ನು ಪಡೆದಳು. **ಜ್ವಲತ್ಪಾವಕಸಂಕಾಶಾ ಸ್ವರ್ಗಮೇವ ಜಗಾಮ ಸಾ.**

ಆದ್ದರಿಂದ ಭಕ್ತಜನರು ಶ್ರೀರಾಮನಾಮವನ್ನು ಜಪಿಸುತ್ತಿರಲಿ, ಶ್ರೀಮದ್ರಾಮಾಯಣವನ್ನು ಓದಿ ಕೃತಾರ್ಥರಾಗಲಿ ಎಂಬ ಸದ್ಭಾವನೆಯಿಂದ **ಶ್ರೀರಾಮಚಂದ್ರಾಪುರಮಠದ ಜಗದ್ಗುರುಪೀಠಾಧ್ಯಕ್ಷರಾದ ಶ್ರೀಶ್ರೀರಾಘವೇಶ್ವರಭಾರತೀ ಮಹಾಸ್ವಾಮಿಗಳವರು** ಈ ಪುಸ್ತಕವನ್ನು ಬರೆಯಿಸಿ ಪ್ರಕಾಶಿಸಿದ್ದಾರೆ. ಭಕ್ತಜನರು ಇದನ್ನು ಪಾರಾಯಣ ಮಾಡಲಿ, ನಾಮಗಳನ್ನು ಜಪಿಸಲಿ, ಇದರಿಂದ ಧನ್ಯರಾಗಲಿ ಎಂಬುದು ಮಹಾಸ್ವಾಮಿಗಳವರ ಇಚ್ಛೆಯಾಗಿರುತ್ತದೆ.

ಮಾನ್ಯರಾದ ವೇದಮೂರ್ತಿ ಶೇಷಗಿರಿ ಗಂಗಾಧರ ಭಟ್ಟ, 'ಸಾಕೇತ' ಗುಂಜಗೋಡು ಮತ್ತು ವಿದ್ವಾನ್ ರಾಮಕೃಷ್ಣ ಭಟ್ಟ, ಕೂಟೇಲು ಇವರೀರ್ವರು ಕಷ್ಟಪಟ್ಟು ಈ ಶ್ರೀರಾಮಸ್ತೋತ್ರಗಳನ್ನು ಮತ್ತು ನಾಮಾವಳಿಗಳನ್ನು ಬೇರೆ ಬೇರೆ ಗ್ರಂಥಗಳಿಂದ ಸಂಗ್ರಹಿಸಿ ಕೊಟ್ಟಿದ್ದಾರೆ. ಇವರೀರ್ವರಿಗೂ ಭಕ್ತಜನರು ಕೃತಜ್ಞರಾಗಿರಬೇಕು.

ವಿಕೃತಿಸಂವತ್ಸರದ ಮಾಘ ಪೂರ್ಣಿಮಾ
ಬೆಂಗಳೂರು
ದಿನಾಂಕ : ೧೮.೦೨.೨೦೧೧

ಮಹಾಮಹೋಪಾಧ್ಯಾಯ
ವಿದ್ವಾನ್ ಎನ್. ರಂಗನಾಥ ಶರ್ಮಾ

ಒಳಪುಟಗಳಲ್ಲಿ

ಪರಮಪೂಜ್ಯ ಶ್ರೀಶ್ರೀಗಳವರ ಅನುಗ್ರಹಸಂದೇಶ	...	v
ಪ್ರಕಾಶಕರ ನುಡಿ	...	vii
ಪ್ರಸ್ತಾವನೆ	...	ix
ಶ್ರೀರಾಮಚಂದ್ರಸಹಸ್ರನಾಮಸ್ತೋತ್ರಮ್	...	1
ಶ್ರೀರಾಮಚಂದ್ರಾಷ್ಟೋತ್ತರಶತನಾಮಸ್ತೋತ್ರಮ್	...	16
ಶ್ರೀರಾಮಚಂದ್ರಸಹಸ್ರನಾಮಾವಲಿಃ	...	22
ಶ್ರೀರಾಮಚಂದ್ರಾಷ್ಟೋತ್ತರಶತನಾಮಾವಲಿಃ	...	43
ಶ್ರೀರಾಮಭಜನಾವಲಿಃ	...	46

ಶ್ರೀರಾಮಚಂದ್ರಸಹಸ್ರನಾಮಸ್ತೋತ್ರಮ್

ಓಮ್ ಅಸ್ಯ ಶ್ರೀರಾಮಚಂದ್ರಸಹಸ್ರನಾಮಮಾಲಾಮಂತ್ರಸ್ಯ ವಿನಾಯಕ ಋಷಿಃ । ಅನುಷ್ಟುಪ್ ಛಂದಃ । ಶ್ರೀರಾಮಚಂದ್ರೋ ದೇವತಾ । ಮಹಾವಿಷ್ಣುರಿತಿ ಬೀಜಮ್ । ಗುಣಭೃನ್ನಿರ್ಗುಣೋ ಮಹಾನಿತಿ ಶಕ್ತಿಃ । ಸಚ್ಚಿದಾನಂದವಿಗ್ರಹ ಇತಿ ಕೀಲಕಮ್ । ಶ್ರೀರಾಮಪ್ರೀತ್ಯರ್ಥೇ ಜಪೇ ವಿನಿಯೋಗಃ ।

ಓಂ ಶ್ರೀರಾಮಚಂದ್ರಾಯ ಅಂಗುಷ್ಠಾಭ್ಯಾಂ ನಮಃ ।
ಓಂ ಸೀತಾಪತಯೇ ತರ್ಜನೀಭ್ಯಾಂ ನಮಃ ।
ಓಂ ರಘುನಾಥಾಯ ಮಧ್ಯಮಾಭ್ಯಾಂ ನಮಃ ।
ಓಂ ಭರತಾಗ್ರಜಾಯ ಅನಾಮಿಕಾಭ್ಯಾಂ ನಮಃ ।
ಓಂ ದಶರಥಾತ್ಮಜಾಯ ಕನಿಷ್ಠಿಕಾಭ್ಯಾಂ ನಮಃ ।
ಓಂ ಹನುಮತ್ಪ್ರಭವೇ ಕರತಲಕರಪೃಷ್ಠಾಭ್ಯಾಂ ನಮಃ ।

ಓಂ ಶ್ರೀರಾಮಚಂದ್ರಾಯ ಹೃದಯಾಯ ನಮಃ ।
ಓಂ ಸೀತಾಪತಯೇ ಶಿರಸೇ ಸ್ವಾಹಾ ।
ಓಂ ರಘುನಾಥಾಯ ಶಿಖಾಯೈ ವಷಟ್ ।
ಓಂ ಭರತಾಗ್ರಜಾಯ ಕವಚಾಯ ಹುಮ್ ।
ಓಂ ದಶರಥಾತ್ಮಜಾಯ ನೇತ್ರತ್ರಯಾಯ ವೌಷಟ್ ।
ಓಂ ಹನುಮತ್ಪ್ರಭವೇ ಅಸ್ತ್ರಾಯ ಫಟ್ ।

ಧ್ಯಾನಮ್

ಧ್ಯಾಯೇದಾಜಾನುಬಾಹುಂ ಧೃತಶರಧನುಷಂ ಬದ್ಧಪದ್ಮಾಸನಸ್ಥಂ
ಪೀತಂ ವಾಸೋ ವಸಾನಂ ನವಕಮಲದಲಸ್ಪರ್ಧಿನೇತ್ರಂ ಪ್ರಸನ್ನಮ್ ।
ವಾಮಾಂಕಾರೂಢಸೀತಾಮುಖಕಮಲಮಿಲಲ್ಲೋಚನಂ ನೀರದಾಭಂ
ನಾನಾಲಂಕಾರದೀಪ್ತಂ ದಧತಮುರುಜಟಾಮಂಡಲಂ ರಾಮಚಂದ್ರಮ್ ॥ ೧

ವೈದೇಹೀಸಹಿತಂ ಸುರದ್ರುಮತಲೇ ಹೈಮೇ ಮಹಾಮಂಟಪೇ
ಮಧ್ಯೇ ಪುಷ್ಪಕಮಾಸನೇ ಮಣಿಮಯೇ ವೀರಾಸನೇ ಸುಸ್ಥಿತಮ್ ।
ಅಗ್ರೇ ವಾಚಯತಿ ಪ್ರಭಂಜನಸುತೇ ತತ್ತ್ವಂ ಮುನಿಭ್ಯಃ ಪರಮ್
ವ್ಯಾಖ್ಯಾಂತಂ ಭರತಾದಿಭಿಃ ಪರಿವೃತಂ ರಾಮಂ ಭಜೇ ಶ್ಯಾಮಲಮ್ ॥ ೨

ಸೌವರ್ಣಮಂಟಪೇ ದಿವ್ಯೇ ಪುಷ್ಪಕೇ ಸುವಿರಾಜಿತೇ ।
ಮೂಲೇ ಕಲ್ಪತರೋಃ ಸ್ವರ್ಣಪೀಠೇ ಸಿಂಹಾಷ್ಟಸಂಯುತೇ ॥ ೩

ಮೃದು ಶ್ಲಕ್ಷ್ಣಾಂತರೇ ತತ್ರ ಜಾನಕ್ಯಾ ಸಹ ಸಂಸ್ಥಿತಮ್ ।
ರಾಮಂ ನೀಲೋತ್ಪಲಶ್ಯಾಮಂ ದ್ವಿಭುಜಂ ಪೀತವಾಸಸಮ್ ॥ ೪

ಸ್ಮಿತವಕ್ತ್ರಂ ಸುಖಾಸೀನಂ ಪದ್ಮಪತ್ರನಿಭೇಕ್ಷಣಮ್ ।
ಕಿರೀಟಹಾರಕೇಯೂರಕುಂಡಲೈಃ ಕಟಕಾದಿಭಿಃ ॥ ೫

ಭ್ರಾಜಮಾನಂ ಜ್ಞಾನಮುದ್ರಾಧರಂ ವೀರಾಸನಸ್ಥಿತಮ್ ।
ವಸಿಷ್ಠವಾಮದೇವಾದ್ಯೈಃ ಸೇವಿತಂ ಲಕ್ಷ್ಮಣಾದಿಭಿಃ ॥ ೬

ರಾಮಂ ಧ್ಯಾತ್ವಾ ಜಪೇನ್ನಿತ್ಯಂ ರಾಮನಾಮಸಹಸ್ರಕಮ್ ।
ಹತ್ಯಾಕೋಟಿಯುತೋ ವಾಪಿ ಮುಚ್ಯತೇ ನಾತ್ರ ಸಂಶಯಃ ॥ ೭

ಅಥ ಶ್ರೀರಾಮಚಂದ್ರಸಹಸ್ರನಾಮಸ್ತೋತ್ರಮ್

ರಾಮಃ ಶ್ರೀಮಾನ್ಮಹಾವಿಷ್ಣುರ್ಜಿಷ್ಣುರ್ದೇವಹಿತಾವಹಃ ।
ತತ್ತ್ವಾತ್ಮಾ ತಾರಕಂ ಬ್ರಹ್ಮ ಶಾಶ್ವತಃ ಸರ್ವಸಿದ್ಧಿದಃ ॥ ೧

ರಾಜೀವಲೋಚನಃ ಶ್ರೀಮಾನ್ ಶ್ರೀರಾಮೋ ರಘುಪುಂಗವಃ ।
ರಾಮಭದ್ರಃ ಸದಾಚಾರೋ ರಾಜೇಂದ್ರೋ ಜಾನಕೀಪತಿಃ ॥ ೨

ಅಗ್ರಗಣ್ಯೋ ವರೇಣ್ಯಶ್ಚ ವರದಃ ಪರಮೇಶ್ವರಃ ।
ಜನಾರ್ದನೋ ಜಿತಾಮಿತ್ರಃ ಪರಾರ್ಥೈಕಪ್ರಯೋಜನಃ ॥ ೩

ವಿಶ್ವಾಮಿತ್ರಪ್ರಿಯೋ ದಾತಾ ಶತ್ರುಜಿಚ್ಛತ್ರುತಾಪನಃ ।
ಸರ್ವಜ್ಞಃ ಸರ್ವವೇದಾದಿಃ ಶರಣ್ಯೋ ವಾಲಿಮರ್ದನಃ ॥ ೪

ಜ್ಞಾನಭವ್ಯೋಽಪರಿಚ್ಛೇದ್ಯೋ ವಾಗ್ಮೀ ಸತ್ಯವ್ರತಃ ಶುಚಿಃ ।
ಜ್ಞಾನಗಮ್ಯೋ ದೃಢಪ್ರಜ್ಞಃ ಖರಧ್ವಂಸೀ ಪ್ರತಾಪವಾನ್ ॥ ೫

ದ್ಯುತಿಮಾನಾತ್ಮವಾನ್ ವೀರೋ ಜಿತಕ್ರೋಧೋಽರಿಮರ್ದನಃ ।
ವಿಶ್ವರೂಪೋ ವಿಶಾಲಾಕ್ಷಃ ಪ್ರಭುಃ ಪರಿವೃಢೋ ದೃಢಃ ॥ ೬

ಈಶಃ ಖಡ್ಗಧರಃ ಶ್ರೀಮಾನ್ ಕೌಸಲ್ಯೇಯೋಽನಸೂಯಕಃ ।
ವಿಪುಲಾಂಸೋ ಮಹೋರಸ್ಕಃ ಪರಮೇಷ್ಠೀ ಪರಾಯಣಃ ॥ ೭

ಸತ್ಯವ್ರತಃ ಸತ್ಯಸಂಧೋ ಗುರುಃ ಪರಮಧಾರ್ಮಿಕಃ ।
ಲೋಕಜ್ಞೋ ಲೋಕವಂದ್ಯಶ್ಚ ಲೋಕಾತ್ಮಾ ಲೋಕಕೃದ್ವಿಭುಃ ॥ ೮

ಅನಾದಿರ್ಭಗವಾನ್ ಸೇವ್ಯೋ ಜಿತಮಾಯೋ ರಘೂದ್ವಹಃ ।
ರಾಮೋ ದಯಾಕರೋ ದಕ್ಷಃ ಸರ್ವಜ್ಞಃ ಸರ್ವಪಾವನಃ ॥ ೯

ಬ್ರಹ್ಮಣ್ಯೋ ನೀತಿಮಾನ್ ಗೋಪ್ತಾ ಸರ್ವದೇವಮಯೋ ಹರಿಃ।
ಸುಂದರಃ ಪೀತವಾಸಾಶ್ಚ ಸೂತ್ರಕಾರಃ ಪುರಾತನಃ॥ ೧೦

ಸೌಮ್ಯೋ ಮಹರ್ಷಿಃ ಕೋದಂಡೀ ಸರ್ವಜ್ಞಃ ಸರ್ವಕೋವಿದಃ।
ಕವಿಃ ಸುಗ್ರೀವವರದಃ ಸರ್ವಪುಣ್ಯಾಧಿಕಪ್ರದಃ॥ ೧೧

ಭವ್ಯೋ ಜಿತಾರಿಷಡ್ವರ್ಗೋ ಮಹೋದಾರೋಽಘನಾಶನಃ।
ಸುಕೀರ್ತಿರಾದಿಪುರುಷಃ ಕಾಂತಃ ಪುಣ್ಯಕೃತಾಗಮಃ॥ ೧೨

ಅಕಲ್ಮಷಶ್ಚತುರ್ಬಾಹುಃ ಸರ್ವಾವಾಸೋ ದುರಾಸದಃ।
ಸ್ಮಿತಭಾಷೀ ನಿವೃತ್ತಾತ್ಮಾ ಸ್ಮೃತಿಮಾನ್ ವೀರ್ಯವಾನ್ ಪ್ರಭುಃ॥ ೧೩

ಧೀರೋ ದಾಂತೋ ಘನಶ್ಯಾಮಃ ಸರ್ವಾಯುಧವಿಶಾರದಃ।
ಅಧ್ಯಾತ್ಮಯೋಗನಿಲಯಃ ಸುಮನಾ ಲಕ್ಷ್ಮಣಾಗ್ರಜಃ॥ ೧೪

ಸರ್ವತೀರ್ಥಮಯಃ ಶೂರಃ ಸರ್ವಯಜ್ಞಫಲಪ್ರದಃ।
ಯಜ್ಞಸ್ವರೂಪೋ ಯಜ್ಞೇಶೋ ಜರಾಮರಣವರ್ಜಿತಃ॥ ೧೫

ವರ್ಣಾಶ್ರಮಗುರುರ್ವರ್ಣೀ ಶತ್ರುಜಿತ್ ಪುರುಷೋತ್ತಮಃ।
ಶಿವಲಿಂಗಪ್ರತಿಷ್ಠಾತಾ ಪರಮಾತ್ಮಾ ಪರಾತ್ಪರಃ॥ ೧೬

ಪ್ರಮಾಣಭೂತೋ ದುರ್ಜ್ಞೇಯಃ ಪೂರ್ಣಃ ಪರಪುರಂಜಯಃ।
ಅನಂತದೃಷ್ಟಿರಾನಂದೋ ಧನುರ್ವೇದೋ ಧನುರ್ಧರಃ॥ ೧೭

ಗುಣಾಕರೋ ಗುಣಶ್ರೇಷ್ಠಃ ಸಚ್ಚಿದಾನಂದವಿಗ್ರಹಃ।
ಅಭಿವಾದ್ಯೋ ಮಹಾಕಾಯೋ ವಿಶ್ವಕರ್ಮಾ ವಿಶಾರದಃ॥ ೧೮

ವಿನೀತಾತ್ಮಾ ವೀತರಾಗಸ್ತಪಸ್ವೀಶೋ ಜನೇಶ್ವರಃ।
ಕಲ್ಯಾಣಪ್ರಕೃತಿಃ ಕಲ್ಪಃ ಸರ್ವೇಶಃ ಸರ್ವಕಾಮದಃ॥ ೧೯

ಅಕ್ಷಯಃ ಪುರುಷಃ ಸಾಕ್ಷೀ ಕೇಶವಃ ಪುರುಷೋತ್ತಮಃ ।
ಲೋಕಾಧ್ಯಕ್ಷೋ ಮಹಾಕಾರ್ಯೋ ವಿಭೀಷಣವರಪ್ರದಃ ॥ ೨೦

ಆನಂದವಿಗ್ರಹೋ ಜ್ಯೋತಿರ್ಹನೂಮತ್ಪ್ರಭುರವ್ಯಯಃ ।
ಭ್ರಾಜಿಷ್ಣುಃ ಸಹನೋ ಭೋಕ್ತಾ ಸತ್ಯವಾದೀ ಬಹುಶ್ರುತಃ ॥ ೨೧

ಸುಖದಃ ಕಾರಣಂ ಕರ್ತಾ ಭವಬಂಧವಿಮೋಚನಃ ।
ದೇವಚೂಡಾಮಣಿರ್ನೇತಾ ಬ್ರಹ್ಮಣ್ಯೋ ಬ್ರಹ್ಮವರ್ಧನಃ ॥ ೨೨

ಸಂಸಾರತಾರಕೋ ರಾಮಃ ಸರ್ವದುಃಖವಿಮೋಕ್ಷಕೃತ್ ।
ವಿದ್ವತ್ತಮೋ ವಿಶ್ವಕರ್ತಾ ವಿಶ್ವಕೃದ್ವಿಶ್ವಕರ್ಮ ಚ ॥ ೨೩

ನಿತ್ಯೋ ನಿಯತಕಲ್ಯಾಣಃ ಸೀತಾಶೋಕವಿನಾಶಕೃತ್ ।
ಕಾಕುತ್ಸ್ಥಃ ಪುಂಡರೀಕಾಕ್ಷೋ ವಿಶ್ವಾಮಿತ್ರಭಯಾಪಹಃ ॥ ೨೪

ಮಾರೀಚಮಥನೋ ರಾಮೋ ವಿರಾಧವಧಪಂಡಿತಃ ।
ದುಃಸ್ವಪ್ನನಾಶನೋ ರಮ್ಯಃ ಕಿರೀಟೀ ತ್ರಿದಶಾಧಿಪಃ ॥ ೨೫

ಮಹಾಧನುರ್ಮಹಾಕಾಯೋ ಭೀಮೋ ಭೀಮಪರಾಕ್ರಮಃ ।
ತತ್ತ್ವಸ್ವರೂಪಸ್ತತ್ತ್ವಜ್ಞಸ್ತತ್ತ್ವವಾದೀ ಸುವಿಕ್ರಮಃ ॥ ೨೬

ಭೂತಾತ್ಮಾ ಭೂತಕೃತ್ ಸ್ವಾಮೀ ಕಾಲಜ್ಞಾನೀ ಮಹಾವಪುಃ ।
ಅನಿರ್ವಿಣ್ಣೋ ಗುಣಗ್ರಾಮೋ ನಿಷ್ಕಲಂಕಃ ಕಲಂಕಹಾ ॥ ೨೭

ಸ್ವಭಾವಭದ್ರಃ ಶತ್ರುಘ್ನಃ ಕೇಶವಃ ಸ್ಥಾಣುರೀಶ್ವರಃ ।
ಭೂತಾದಿಃ ಶಂಭುರಾದಿತ್ಯಃ ಸ್ಥವಿಷ್ಠಃ ಸ್ಥವಿರೋ ಧ್ರುವಃ ॥ ೨೮

ಕವಚೀ ಕುಂಡಲೀ ಚಕ್ರೀ ಖಡ್ಗೀ ಭಕ್ತಜನಪ್ರಿಯಃ ।
ಅಮೃತ್ಯುರ್ಜನ್ಮರಹಿತಃ ಸರ್ವಜಿತ್ಸರ್ವಗೋಚರಃ ॥ ೨೯

ಅನುತ್ತಮೋಽಪ್ರಮೇಯಾತ್ಮಾ ಸರ್ವಾತ್ಮಾ ಗುಣಸಾಗರಃ ।
ಸಮಃ ಸಮಾತ್ಮಾ ಸಮಗೋ ಜಟಾಮಕುಟಮಂಡಿತಃ ॥ ೩೦

ಅಜೇಯಃ ಸರ್ವಭೂತಾತ್ಮಾ ವಿಷ್ವಕ್ಸೇನೋ ಮಹಾತಪಾಃ ।
ಲೋಕಾಧ್ಯಕ್ಷೋ ಮಹಾಬಾಹುರಮೃತೋ ವೇದವಿತ್ತಮಃ ॥ ೩೧

ಸಹಿಷ್ಣುಃ ಸದ್ಗತಿಃ ಶಾಸ್ತಾ ವಿಶ್ವಯೋನಿರ್ಮಹಾದ್ಯುತಿಃ ।
ಅತೀಂದ್ರ ಊರ್ಜಿತಃ ಪ್ರಾಂಶುರುಪೇಂದ್ರೋ ವಾಮನೋ ಬಲಿಃ ॥ ೩೨

ಧನುರ್ವೇದೋ ವಿಧಾತಾ ಚ ಬ್ರಹ್ಮಾ ವಿಷ್ಣುಶ್ಚ ಶಂಕರಃ ।
ಹಂಸೋ ಮರೀಚಿರ್ಗೋವಿಂದೋ ರತ್ನಗರ್ಭೋ ಮಹಾದ್ಯುತಿಃ ॥ ೩೩

ವ್ಯಾಸೋ ವಾಚಸ್ಪತಿಃ ಸರ್ವದೃಕ್ಸರ್ವಾಸುರಮರ್ದನಃ ।
ಜಾನಕೀವಲ್ಲಭಃ ಶ್ರೀಮಾನ್ ಪ್ರಕಟಃ ಪ್ರೀತಿವರ್ಧನಃ ॥ ೩೪

ಸಂಭವೋಽತೀಂದ್ರಿಯೋ ವೇದ್ಯೋಽನಿರ್ದೇಶೋ ಜಾಂಬವತ್ಪ್ರಭುಃ ।
ಮದನೋ ಮನ್ಮಥೋ ವ್ಯಾಪೀ ವಿಶ್ವರೂಪೋ ನಿರಂಜನಃ ॥ ೩೫

ನಾರಾಯಣೋಽಗ್ರಣೀಃ ಸಾಧುರ್ಜಟಾಯುಃಪ್ರೀತಿವರ್ಧನಃ ।
ನೈಕರೂಪೋ ಜಗನ್ನಾಥಃ ಸುರಕಾರ್ಯಹಿತಃ ಪ್ರಭುಃ ॥ ೩೬

ಜಿತಕ್ರೋಧೋ ಜಿತಾರಾತಿಃ ಪ್ಲವಗಾಧಿಪರಾಜ್ಯದಃ ।
ವಸುದಃ ಸುಭುಜೋ ನೈಕಮಾಯೋ ಭವ್ಯಃ ಪ್ರಮೋದನಃ ॥ ೩೭

ಚಂಡಾಂಶುಃ ಸಿದ್ಧಸಂಕಲ್ಪಃ ಶರಣಾಗತವತ್ಸಲಃ ।
ಅಗದೋ ರೋಗಹರ್ತಾ ಚ ಮಂತ್ರಜ್ಞೋ ಮಂತ್ರಭಾವನಃ ॥ ೩೮

ಸೌಮಿತ್ರಿವತ್ಸಲೋ ಧುರ್ಯೋ ವ್ಯಕ್ತಾವ್ಯಕ್ತಸ್ವರೂಪಧೃತ್ ।
ವಸಿಷ್ಠೋ ಗ್ರಾಮಣೀಃ ಶ್ರೀಮಾನನುಕೂಲಃ ಪ್ರಿಯಂವದಃ ॥ ೩೯

ಅತುಲಃ ಸಾತ್ತ್ವಿಕೋ ಧೀರಃ ಶರಾಸನವಿಶಾರದಃ ।
ಜ್ಯೇಷ್ಠಃ ಸರ್ವಗುಣೋಪೇತಃ ಶಕ್ತಿಮಾಂಸ್ತಾಟಕಾಂತಕಃ ॥ ೪೦

ವೈಕುಂಠಃ ಪ್ರಾಣಿನಾಂ ಪ್ರಾಣಃ ಕಮಠಃ ಕಮಲಾಧಿಪಃ ।
ಗೋವರ್ಧನಧರೋ ಮತ್ಸ್ಯರೂಪಃ ಕಾರುಣ್ಯಸಾಗರಃ ॥ ೪೧

ಕುಂಭಕರ್ಣಪ್ರಭೇತ್ತಾ ಚ ಗೋಪೀಗೋಪಾಲಸಂವೃತಃ ।
ಮಾಯಾವೀ ವ್ಯಾಪಕೋ ವ್ಯಾಪೀ ರೈಣುಕೇಯಬಲಾಪಹಃ ॥ ೪೨

ಪಿನಾಕಮಥನೋ ವಂದ್ಯಃ ಸಮರ್ಥೋ ಗರುಡಧ್ವಜಃ ।
ಲೋಕತ್ರಯಾಶ್ರಯೋ ಲೋಕಭರಿತೋ ಭರತಾಗ್ರಜಃ ॥ ೪೩

ಶ್ರೀಧರಃ ಸದ್ಗತಿರ್ಲೋಕಸಾಕ್ಷೀ ನಾರಾಯಣೋ ವಿಭುಃ ।
ಮನೋರೂಪೀ ಮನೋವೇಗೀ ಪೂರ್ಣಃ ಪುರುಷಪುಂಗವಃ ॥ ೪೪

ಯದುಶ್ರೇಷ್ಠೋ ಯದುಪತಿರ್ಭೂತಾವಾಸಃ ಸುವಿಕ್ರಮಃ ।
ತೇಜೋಧರಾಧರೋಽವ್ಯಗ್ರಶ್ಚತುರ್ಮೂರ್ತಿರ್ಮಹಾನಿಧಿಃ ॥ ೪೫

ಚಾಣೂರಮಥನೋ ವಂದ್ಯಃ ಶಾಂತೋ ಭರತವಂದಿತಃ ।
ಶಬ್ದಾತಿಗೋ ಗಭೀರಾತ್ಮಾ ಕೋಮಲಾಂಗಃ ಪ್ರಜಾಗರಃ ॥ ೪೬

ಲೋಕೋರ್ಧ್ವಗಃ ಶೇಷಶಾಯೀ ಕ್ಷೀರಾಬ್ಧಿನಿಲಯೋಽಮಲಃ ।
ಆತ್ಮಜ್ಯೋತಿರದೀನಾತ್ಮಾ ಸಹಸ್ರಾರ್ಚಿಃ ಸಹಸ್ರಪಾತ್ ॥ ೪೭

ಅಮೃತಾಂಶುರ್ಮಹೀಭರ್ತಾ ನಿವೃತ್ತವಿಷಯಸ್ಪೃಹಃ ।
ತ್ರಿಕಾಲಜ್ಞೋ ಮುನಿಃ ಸಾಕ್ಷೀ ವಿಹಾಯಸಗತಿಃ ಕೃತೀ ॥ ೪೮

ಪರ್ಜನ್ಯಃ ಕುಮುದೋ ಭೂತಾವಾಸಃ ಕಮಲಲೋಚನಃ ।
ಶ್ರೀವತ್ಸವಕ್ಷಾಃ ಶ್ರೀವಾಸೋ ವೀರಹಾ ಲಕ್ಷ್ಮಣಾಗ್ರಜಃ ॥ ೪೯

ಲೋಕಾಭಿರಾಮೋ ಲೋಕಾರಿಮರ್ದನಃ ಸೇವಕಪ್ರಿಯಃ ।
ಸನಾತನತಮೋ ಮೇಘಶ್ಯಾಮಲೋ ರಾಕ್ಷಸಾಂತಕಃ ॥ ೫೦

ದಿವ್ಯಾಯುಧಧರಃ ಶ್ರೀಮಾನಪ್ರಮೇಯೋ ಜಿತೇಂದ್ರಿಯಃ ।
ಭೂದೇವವಂದ್ಯೋ ಜನಕಪ್ರಿಯಕೃತ್ಪ್ರಪಿತಾಮಹಃ ॥ ೫೧

ಉತ್ತಮಃ ಸಾತ್ತ್ವಿಕಃ ಸತ್ಯಃ ಸತ್ಯಸಂಧಸ್ತ್ರಿವಿಕ್ರಮಃ ।
ಸುವೃತ್ತಃ ಸುಗಮಃ ಸೂಕ್ಷ್ಮಃ ಸುಘೋಷಃ ಸುಖದಃ ಸುಹೃತ್ ॥ ೫೨

ದಾಮೋದರೋಽಚ್ಯುತಃ ಶಾರ್ಙ್ಗೀ ವಾಮನೋ ಮಧುರಾಧಿಪಃ ।
ದೇವಕೀನಂದನಃ ಶೌರಿಃ ಶೂರಃ ಕೈಟಭಮರ್ದನಃ ॥ ೫೩

ಸಪ್ತತಾಲಪ್ರಭೇತ್ತಾ ಚ ಮಿತ್ರವಂಶಪ್ರವರ್ಧನಃ ।
ಕಾಲಸ್ವರೂಪೀ ಕಾಲಾತ್ಮಾ ಕಾಲಃ ಕಲ್ಯಾಣದಃ ಕಲಿಃ ॥ ೫೪

ಋತುಃ ಸಂವತ್ಸರಃ ಪಕ್ಷೋ ಹ್ಯಯನಂ ದಿವಸೋ ಯುಗಃ ।
ಸ್ತವ್ಯೋ ವಿವಿಕ್ತೋ ನಿರ್ಲೇಪಃ ಸರ್ವವ್ಯಾಪೀ ನಿರಾಕುಲಃ ॥ ೫೫

ಅನಾದಿನಿಧನಃ ಸರ್ವಲೋಕಪೂಜ್ಯೋ ನಿರಾಮಯಃ ।
ರಸೋ ರಸಜ್ಞಃ ಸಾರಜ್ಞೋ ಲೋಕಸಾರೋ ರಸಾತ್ಮಕಃ ॥ ೫೬

ಸರ್ವದುಃಖಾತಿಗೋ ವಿದ್ಯಾರಾಶಿಃ ಪರಮಗೋಚರಃ ।
ಶೇಷೋ ವಿಶೇಷೋ ವಿಗತಕಲ್ಮಷೋ ರಘುಪುಂಗವಃ ॥ ೫೭

ವರ್ಣಶ್ರೇಷ್ಠೋ ವರ್ಣಭಾವ್ಯೋ ವರ್ಣೀ ವರ್ಣಗುಣೋಜ್ಜ್ವಲಃ ।
ಕರ್ಮಸಾಕ್ಷೀ ಗುಣಶ್ರೇಷ್ಠೋ ದೇವಾಸುರನಮಸ್ಕೃತಃ ॥ ೫೮

ದೇವಾಧಿದೇವೋ ದೇವರ್ಷಿರ್ದೇವಾಸುರವರಪ್ರದಃ ॥
ಸರ್ವದೇವಮಯಶ್ಚಕ್ರೀ ಶಾರ್ಙ್ಗಪಾಣೀ ರಘೂತ್ತಮಃ ॥ ೫೯

ಮನೋಬುದ್ಧಿರಹಂಕಾರಃ ಪ್ರಕೃತಿಃ ಪುರುಷೋಽವ್ಯಯಃ ।
ನ್ಯಾಯೋ ನ್ಯಾಯೀ ನಯೀ ಶ್ರೀಮಾನ್ ನಯೋ ನಗಧರೋ ಧ್ರುವಃ ॥ ೬೦

ಲಕ್ಷ್ಮೀವಿಶ್ವಂಭರಾಭರ್ತಾ ದೇವೇಂದ್ರೋ ಬಲಿಮರ್ದನಃ ।
ಬಾಣಾರಿಮರ್ದನೋ ಯಜ್ವಾಽನುತ್ತಮೋ ಮುನಿಸೇವಿತಃ ॥ ೬೧

ದೇವಾಗ್ರಣೀಃ ಶಿವಧ್ಯಾನತತ್ಪರಃ ಪರಮಃ ಪರಃ ।
ಸಾಮಗೇಯಪ್ರಿಯಃ ಶೂರಃ ಪೂರ್ಣಕೀರ್ತಿಃ ಸುಲೋಚನಃ ॥ ೬೨

ಅವ್ಯಕ್ತಲಕ್ಷಣೋ ವ್ಯಕ್ತೋ ದಶಾಸ್ಯದ್ವಿಪಕೇಸರೀ।
ಕಲಾನಿಧಿಃ ಕಲಾನಾಥಃ ಕಮಲಾನಂದವರ್ಧನಃ ॥ ೬೩

ಪುಣ್ಯಃ ಪುಣ್ಯಾಧಿಕಃ ಪೂರ್ಣಃ ಪೂರ್ವಃ ಪೂರಯಿತಾ ರವಿಃ ।
ಜಟಿಲಃ ಕಲ್ಮಷಧ್ವಾಂತಪ್ರಭಂಜನವಿಭಾವಸುಃ ॥ ೬೪

ಜಯೀ ಜಿತಾರಿಃ ಸರ್ವಾದಿಃ ಶಮನೋ ಭವಭಂಜನಃ ।
ಅಲಂಕರಿಷ್ಣುರಚಲೋ ರೋಚಿಷ್ಣುರ್ವಿಕ್ರಮೋತ್ತಮಃ ॥ ೬೫

ಆಶುಃ ಶಬ್ದಪತಿಃ ಶಬ್ದಾಗೋಚರೋ ರಂಜನೋ ಲಘುಃ ।
ನಿಃಶಬ್ದಃಪುರುಷೋ ಮಾಯೀ ಸ್ಥೂಲಃ ಸೂಕ್ಷ್ಮೋ ವಿಲಕ್ಷಣಃ ॥ ೬೬

ಆತ್ಮಯೋನಿರಯೋನಿಶ್ಚ ಸಪ್ತಜಿಹ್ವಃ ಸಹಸ್ರಪಾತ್ ।
ಸನಾತನತಮಃ ಸ್ರಗ್ವೀ ಪೇಶಲೋ ಜೀವಿನಾಂ ವರಃ ॥ ೬೭

ಶಕ್ತಿಮಾನ್ ಶಂಖಭೃನ್ನಾಥೋ ಗದಾಪದ್ಮರಥಾಂಗಭೃತ್ ।
ನಿರೀಹೋ ನಿರ್ವಿಕಲ್ಪಶ್ಚ ಚಿದ್ರೂಪೋ ವೀತಸಾಧ್ವಸಃ ॥ ೬೮

ಶತಾನನಃ ಸಹಸ್ರಾಕ್ಷಃ ಶತಮೂರ್ತಿರ್ಘನಪ್ರಭಃ ।
ಹೃತ್ಪುಂಡರೀಕಶಯನಃ ಕಠಿನೋ ದ್ರವ ಏವ ಚ ॥ ೬೯

ಸೂರ್ಯೋ ಗ್ರಹಪತಿಃ ಶ್ರೀಮಾನ್ ಸಮರ್ಥೋಽನರ್ಥನಾಶನಃ ।
ಅಧರ್ಮಶತ್ರೂ ರಕ್ಷೋಘ್ನಃ ಪುರುಹೂತಃ ಪುರುಷ್ಟುತಃ ॥ ೭೦

ಬ್ರಹ್ಮಗರ್ಭೋ ಬೃಹದ್ಗರ್ಭೋ ಧರ್ಮಧೇನುರ್ಧನಾಗಮಃ ।
ಹಿರಣ್ಯಗರ್ಭೋ ಜ್ಯೋತಿಷ್ಮಾನ್ ಸುಲಲಾಟಃ ಸುವಿಕ್ರಮಃ ॥ ೭೧

ಶಿವಪೂಜಾರತಃ ಶ್ರೀಮಾನ್ ಭವಾನೀಪ್ರಿಯಕೃದ್ವಶೀ।
ನರೋ ನಾರಾಯಣಃ ಶ್ಯಾಮಃ ಕಪರ್ದೀ ನೀಲಲೋಹಿತಃ ॥ ೭೨

ರುದ್ರಃ ಪಶುಪತಿಃ ಸ್ಥಾಣುರ್ವಿಶ್ವಾಮಿತ್ರೋ ದ್ವಿಜೇಶ್ವರಃ ।
ಮಾತಾಮಹೋ ಮಾತರಿಶ್ವಾ ವಿರಂಚಿರ್ವಿಷ್ಟರಶ್ರವಾಃ ॥ ೭೩

ಅಕ್ಷೋಭ್ಯಃ ಸರ್ವಭೂತಾನಾಂ ಚಂಡಃ ಸತ್ಯಪರಾಕ್ರಮಃ ।
ವಾಲಖಿಲ್ಯೋ ಮಹಾಕಲ್ಪಃ ಕಲ್ಪವೃಕ್ಷಃ ಕಲಾಧರಃ ॥ ೭೪

ನಿದಾಘಸ್ತಪನೋ ಮೇಘಃ ಶುಕ್ರಃ ಪರಬಲಾಪಹೃತ್ ।
ವಸುಶ್ರವಾಃ ಕವ್ಯವಾಹಃ ಪ್ರತಪ್ತೋ ವಿಶ್ವಭೋಜನಃ ॥ ೭೫

ರಾಮೋ ನೀಲೋತ್ಪಲಶ್ಯಾಮೋ ಜ್ಞಾನಸ್ಕಂಧೋ ಮಹಾದ್ಯುತಿಃ ।
ಕಬಂಧಮಥನೋ ದಿವ್ಯಃ ಕಂಬುಗ್ರೀವಃ ಶಿವಪ್ರಿಯಃ ॥ ೭೬

ಸುಖೀ ನೀಲಃ ಸುನಿಷ್ಪನ್ನಃ ಸುಲಭಃ ಶಿಶಿರಾತ್ಮಕಃ ।
ಅಸಂಸೃಷ್ಟೋಽತಿಥಿಃ ಶೂರಃ ಪ್ರಮಾಥೀ ಪಾಪನಾಶಕೃತ್ ॥ ೭೭

ಪವಿತ್ರಪಾದಃ ಪಾಪಾರಿರ್ಮಣಿಪೂರೋ ನಭೋಗತಿಃ ।
ಉತ್ತಾರಣೋ ದುಷ್ಕೃತಿಹಾ ದುರ್ಧರ್ಷೋ ದುಸ್ಸಹೋ ಬಲಃ ॥ ೭೮

ಅಮೃತೇಶೋಽ ಮೃತವಪುರ್ಧರ್ಮೀ ಧರ್ಮಃಕೃಪಾಕರಃ ।
ಭರ್ಗೋ ವಿವಸ್ವಾನಾದಿತ್ಯೋ ಯೋಗಾಚಾರ್ಯೋ ದಿವಸ್ಪತಿಃ ॥ ೭೯

ಉದಾರಕೀರ್ತಿರುದ್ಯೋಗೀ ವಾಙ್ಮಯಃ ಸದಸನ್ಮಯಃ ।
ನಕ್ಷತ್ರಮಾನೀ ನಾಕೇಶಃ ಸ್ವಾಧಿಷ್ಠಾನಃ ಷಡಾಶ್ರಯಃ ॥ ೮೦

ಚತುರ್ವರ್ಗಫಲಂ ವರ್ಣಶಕ್ತಿತ್ರಯಫಲಂ ವಿಧಿಃ ।
ನಿಧಾನಗರ್ಭೋ ನಿರ್ವ್ಯಾಜೋ ನಿರೀಶೋ ವ್ಯಾಲಮರ್ದನಃ ॥ ೮೧

ಶ್ರೀವಲ್ಲಭಃ ಶಿವಾರಂಭಃ ಶಾಂತೋ ಭದ್ರಃ ಸಮಂಜಸಃ ।
ಭೂಶಾಯೀ ಭೂತಕೃದ್ಭೂತಿಭೂಷಣೋ ಭೂತವಾಹನಃ ॥ ೮೨

ಅಕಾಯೋ ಭಕ್ತಕಾಯಸ್ಥಃ ಕಾಲಜ್ಞಾನೀ ಮಹಾಪಟುಃ ।
ಪರಾರ್ಥವೃತ್ತಿರಚಲೋ ವಿವಿಕ್ತಃ ಶ್ರುತಿಸಾಗರಃ ॥ ೮೩

ಸ್ವಭಾವಭದ್ರೋ ಮಧ್ಯಸ್ಥಃ ಸಂಸಾರಭಯನಾಶನಃ ।
ವೇದ್ಯೋ ವೈದ್ಯೋ ವಿಯದ್ಗೋಪ್ತಾ ಸರ್ವಾಮರಮುನೀಶ್ವರಃ ॥ ೮೪

ಸುರೇಂದ್ರಃ ಕಾರಣಂ ಕರ್ಮಕರಃ ಕರ್ಮೀ ಹ್ಯಧೋಕ್ಷಜಃ ।
ಧುರ್ಯೋಽಗ್ರಧುರ್ಯೋ ಧಾತ್ರೀಶಃ ಸಂಕಲ್ಪಃ ಶರ್ವರೀಪತಿಃ ॥ ೮೫

ಪರಮಾರ್ಥಗುರುರ್ದೃಷ್ಟಿಃ ಸುಚಿರಾಶ್ರಿತವತ್ಸಲಃ ।
ವಿಷ್ಣುರ್ಜಿಷ್ಣುರ್ವಿಭುರ್ಯಜ್ಞೋ ಯಜ್ಞೇಶೋ ಯಜ್ಞಪಾಲಕಃ ॥ ೮೬

ಪ್ರಭುರ್ವಿಷ್ಣುರ್ಗ್ರಸಿಷ್ಣುಶ್ಚ ಲೋಕಾತ್ಮಾ ಲೋಕಪಾಲಕಃ ।
ಕೇಶವಃ ಕೇಶಿಹಾ ಕಾವ್ಯಃ ಕವಿಃ ಕಾರಣಕಾರಣಮ್ ॥ ೮೭

ಕಾಲಕರ್ತಾ ಕಾಲಶೇಷೋ ವಾಸುದೇವಃ ಪುರುಷ್ಟುತಃ।
ಆದಿಕರ್ತಾ ವರಾಹಶ್ಚ ವಾಮನೋ ಮಧುಸೂದನಃ ॥ ೮೮

ನಾರಾಯಣೋ ನರೋ ಹಂಸೋ ವಿಷ್ವಕ್ಸೇನೋ ಜನಾರ್ದನಃ ।
ವಿಶ್ವಕರ್ತಾ ಮಹಾಯಜ್ಞೋ ಜ್ಯೋತಿಷ್ಮಾನ್ ಪುರುಷೋತ್ತಮಃ ॥ ೮೯

ವೈಕುಂಠಃ ಪುಂಡರೀಕಾಕ್ಷಃ ಕೃಷ್ಣಃ ಸೂರ್ಯಃ ಸುರಾರ್ಚಿತಃ ।
ನಾರಸಿಂಹೋ ಮಹಾಭೀಮೋ ವಜ್ರದಂಷ್ಟ್ರೋ ನಖಾಯುಧಃ ॥ ೯೦

ಆದಿದೇವೋ ಜಗತ್ಕರ್ತಾ ಯೋಗೀಶೋ ಗರುಡಧ್ವಜಃ ।
ಗೋವಿಂದೋ ಗೋಪತಿರ್ಗೋಪ್ತಾ ಭೂಪತಿರ್ಭುವನೇಶ್ವರಃ ॥ ೯೧

ಪದ್ಮನಾಭೋ ಹೃಷೀಕೇಶೋ ಧಾತಾ ದಾಮೋದರಃ ಪ್ರಭುಃ ।
ತ್ರಿವಿಕ್ರಮಸ್ತ್ರಿಲೋಕೇಶೋ ಬ್ರಹ್ಮೇಶಃ ಪ್ರೀತಿವರ್ಧನಃ ॥ ೯೨

ಸಂನ್ಯಾಸೀ ಶಾಸ್ತ್ರತತ್ತ್ವಜ್ಞೋ ಮಂದರಾದ್ರಿನಿಕೇತನಃ ।
ವಾಮನೋ ದುಷ್ಟದಮನೋ ಗೋವಿಂದೋ ಗೋಪವಲ್ಲಭಃ ॥ ೯೩

ಭಕ್ತಪ್ರಿಯೋಽಚ್ಯುತಃ ಸತ್ಯಃ ಸತ್ಯಕೀರ್ತಿರ್ಧೃತಿಃ ಸ್ಮೃತಿಃ ।
ಕಾರುಣ್ಯಃ ಕರುಣಾವಾಸಃ ಪಾಪಹಾ ಶಾಂತಿವರ್ಧನಃ ॥ ೯೪

ಬದರೀನಿಲಯಃ ಶಾಂತಸ್ತಪಸ್ವೀ ವೈದ್ಯುತಪ್ರಭಃ ।
ಭೂತಾವಾಸೋ ಗುಹಾವಾಸಃ ಶ್ರೀನಿವಾಸಃ ಶ್ರಿಯಃ ಪತಿಃ ॥ ೯೫

ತಪೋವಾಸೋ ಮುದಾವಾಸಃ ಸತ್ಯವಾಸಃ ಸನಾತನಃ ।
ಪುರುಷಃ ಪುಣ್ಯವಾನ್ ಪುಣ್ಯಃ ಪುಷ್ಕರಾಕ್ಷೋ ಮಹೇಶ್ವರಃ ॥ ೯೬

ಪೂರ್ಣಮೂರ್ತಿಃ ಪುರಾಣಜ್ಞಃ ಪುಣ್ಯದಃ ಪ್ರೀತಿವರ್ಧನಃ ।
ಶಂಖೀ ಚಕ್ರೀ ಗದೀ ಶಾರ್ಙ್ಗೀ ಲಾಂಗಲೀ ಮುಸಲೀ ಹಲೀ ॥ ೯೭

ಕಿರೀಟೀ ಕುಂಡಲೀ ಹಾರೀ ಮೇಖಲೀ ಕವಚೀ ಧ್ವಜೀ ।
ಯೋಧಜೇತಾ ಮಹಾವೀರ್ಯಃ ಶತ್ರುಘ್ನಃ ಶತ್ರುತಾಪನಃ ॥ ೯೮

ಶಾಸ್ತಾ ಶಾಸ್ತ್ರಕರಃ ಶಾಸ್ತ್ರಂ ಶಂಕರಃ ಶಂಕರಸ್ತುತಃ ।
ಸಾರಥಿಃ ಸಾತ್ತ್ವಿಕಃ ಸ್ವಾಮೀ ಸಾಮವೇದಪ್ರಿಯಃ ಸಮಃ ॥ ೯೯

ಪವನಃ ಸಾಹಸಃ ಶಕ್ತಿಃ ಸಂಪೂರ್ಣಾಂಗಃ ಸಮೃದ್ಧಿಮಾನ್ ।
ಸ್ವರ್ಗದಃ ಕಾಮದಃ ಶ್ರೀದಃ ಕೀರ್ತಿದಃ ಕೀರ್ತಿದಾಯಕಃ ॥ ೧೦೦

ಮೋಕ್ಷದಃ ಪುಂಡರೀಕಾಕ್ಷಃ ಕ್ಷೀರಾಬ್ಧಿಕೃತಕೇತನಃ ।
ಸರ್ವಾತ್ಮಾ ಸರ್ವಲೋಕೇಶಃ ಪ್ರೇರಕಃ ಪಾಪನಾಶಕಃ ॥ ೧೦೧

ಸರ್ವವ್ಯಾಪೀ ಜಗನ್ನಾಥಃ ಸರ್ವಲೋಕಮಹೇಶ್ವರಃ ।
ಸರ್ಗಸ್ಥಿತ್ಯಂತಕೃದ್ದೇವಃ ಸರ್ವಲೋಕಸುಖಾವಹಃ ॥ ೧೦೨

ಅಕ್ಷಯಃ ಶಾಶ್ವತೋಽನಂತಃ ಕ್ಷಯವೃದ್ಧಿವಿವರ್ಜಿತಃ ।
ನಿರ್ಲೇಪೋ ನಿರ್ಗುಣಃ ಸೂಕ್ಷ್ಮೋ ನಿರ್ವಿಕಾರೋ ನಿರಂಜನಃ ॥ ೧೦೩

ಸರ್ವೋಪಾಧಿವಿನಿರ್ಮುಕ್ತಃ ಸತ್ತಾಮಾತ್ರವ್ಯವಸ್ಥಿತಃ ।
ಅವಿಕಾರೀ ವಿಭುರ್ನಿತ್ಯಃ ಪರಮಾತ್ಮಾ ಸನಾತನಃ ॥ ೧೦೪

ಅಚಲೋ ನಿಶ್ಚಲೋ ವ್ಯಾಪೀ ನಿತ್ಯತೃಪ್ತೋ ನಿರಾಶ್ರಯಃ ।
ಶ್ಯಾಮೋ ಯುವಾ ಲೋಹಿತಾಕ್ಷೋ ದೀಪ್ತ್ಯಾಶೋಭಿತಭೂಷಣಃ ॥ ೧೦೫

ಆಜಾನುಬಾಹುಃ ಸುಮುಖಃ ಸಿಂಹಸ್ಕಂಧೋ ಮಹಾಭುಜಃ ।
ಸತ್ತ್ವವಾನ್ ಗುಣಸಂಪನ್ನೋ ದೀಪ್ಯಮಾನಃ ಸ್ವತೇಜಸಾ ॥ ೧೦೬

ಕಾಲಾತ್ಮಾ ಭಗವಾನ್ ಕಾಲಃ ಕಾಲಚಕ್ರಪ್ರವರ್ತಕಃ ।
ನಾರಾಯಣಃ ಪರಂಜ್ಯೋತಿಃ ಪರಮಾತ್ಮಾ ಸನಾತನಃ ॥ ೧೦೭

ವಿಶ್ವಕೃದ್ವಿಶ್ವಭೋಕ್ತಾ ಚ ವಿಶ್ವಗೋಪ್ತಾ ಚ ಶಾಶ್ವತಃ ।
ವಿಶ್ವಂಭರೋ ವಿಶ್ವಮೂರ್ತಿರ್ವಿಶ್ವಾತ್ಮಾ ವಿಶ್ವಭಾವನಃ ॥ ೧೦೮

ಸರ್ವಭೂತಸುಹೃಚ್ಛಾಂತಃ ಸರ್ವಭೂತಾನುಕಂಪನಃ ।
ಸರ್ವೇಶ್ವರಃ ಸರ್ವಶರ್ವಃ ಸರ್ವದಾಽಽಶ್ರಿತವತ್ಸಲಃ ॥ ೧೦೯

ಸರ್ವಗಃ ಸರ್ವಭೂತೇಶಃ ಸರ್ವಭೂತಾಶಯಸ್ಥಿತಃ ।
ಅಭ್ಯಂತರಸ್ಥಸ್ತಮಸಶ್ಛೇತ್ತಾ ನಾರಾಯಣಃ ಪರಃ ॥ ೧೧೦

ಅನಾದಿನಿಧನಃ ಸ್ರಷ್ಟಾ ಪ್ರಜಾಪತಿಪತಿರ್ಹರಿಃ ।
ನರಸಿಂಹೋ ಹೃಷೀಕೇಶಃ ಸರ್ವಾತ್ಮಾ ಸರ್ವದೃಗ್ವಶೀ ॥ ೧೧೧

ಜಗತಸ್ತಸ್ಥುಷಶ್ಚೈವ ಪ್ರಭುರ್ನೇತಾ ಸನಾತನಃ ।
ಕರ್ತಾ ಧಾತಾ ವಿಧಾತಾ ಚ ಸರ್ವೇಷಾಂ ಪತಿರೀಶ್ವರಃ ॥ ೧೧೨

ಸಹಸ್ರಮೂರ್ಧಾ ವಿಶ್ವಾತ್ಮಾ ವಿಷ್ಣುರ್ವಿಶ್ವದೃಗವ್ಯಯಃ ।
ಪುರಾಣಪುರುಷಃ ಶ್ರೇಷ್ಠಃ ಸಹಸ್ರಾಕ್ಷಃ ಸಹಸ್ರಪಾತ್ ॥ ೧೧೩

ತತ್ತ್ವಂ ನಾರಾಯಣೋ ವಿಷ್ಣುರ್ವಾಸುದೇವಃ ಸನಾತನಃ ।
ಪರಮಾತ್ಮಾ ಪರಂ ಬ್ರಹ್ಮ ಸಚ್ಚಿದಾನಂದವಿಗ್ರಹಃ ॥ ೧೧೪

ಪರಂಜ್ಯೋತಿಃ ಪರಂಧಾಮ ಪರಾಕಾಶಃ ಪರಾತ್ಪರಃ
ಅಚ್ಯುತಃ ಪುರುಷಃ ಕೃಷ್ಣಃ ಶಾಶ್ವತಃ ಶಿವ ಈಶ್ವರಃ ॥ ೧೧೫

ನಿತ್ಯಃ ಸರ್ವಗತಃ ಸ್ಥಾಣುಃ ರುದ್ರಃ ಸಾಕ್ಷೀ ಪ್ರಜಾಪತಿಃ ।
ಹಿರಣ್ಯಗರ್ಭಃ ಸವಿತಾ ಲೋಕಕೃಲ್ಲೋಕಭುಗ್ವಿಭುಃ ॥ ೧೧೬

ಓಂಕಾರವಾಚ್ಯೋ ಭಗವಾನ್ ಶ್ರೀಭೂನೀಲಾಪತಿಃ ಪ್ರಭುಃ ।
ಸರ್ವಲೋಕೇಶ್ವರಃ ಶ್ರೀಮಾನ್ ಸರ್ವಜ್ಞಃ ಸರ್ವತೋಮುಖಃ ॥ ೧೧೭

ಸ್ವಾಮೀ ಸುಶೀಲಃ ಸುಲಭಃ ಸರ್ವಗಃ ಸರ್ವಶಕ್ತಿಮಾನ್ ।
ನಿತ್ಯಃ ಸಂಪೂರ್ಣಕಾಮಶ್ಚ ನೈಸರ್ಗಿಕಸುಹೃತ್ ಸುಖೀ ॥ ೧೧೮

ಕೃಪಾಪೀಯೂಷಜಲಧಿಃ ಶರಣ್ಯಃ ಸರ್ವದೇಹಿನಾಮ್ ।
ಶ್ರೀಮಾನ್ ನಾರಾಯಣಃ ಸ್ವಾಮೀ ಜಗತಾಂ ಪ್ರಭುರೀಶ್ವರಃ ॥ ೧೧೯

ಶ್ರೀಶಃ ಶರಣ್ಯೋ ಭೂತಾನಾಂ ಸಂಶ್ರಿತಾಭೀಷ್ಟದಾಯಕಃ ।
ಅನಂತಃ ಶ್ರೀಪತಿಃ ಶೂರೋ ಗುಣಭೃನ್ನಿರ್ಗುಣೋ ಮಹಾನ್ ॥ ೧೨೦

ಫಲಶ್ರುತಿಃ

ಏವಮಾದೀನಿ ನಾಮಾನಿ ಹ್ಯಸಂಖ್ಯಾನ್ಯಪರಾಣಿ ಚ ।
ಏಕೈಕಂ ನಾಮ ರಾಮಸ್ಯ ಸರ್ವಪಾಪಪ್ರಣಾಶನಮ್ ॥ ೧

ಸಹಸ್ರನಾಮಫಲದಂ ಸರ್ವೈಶ್ವರ್ಯಪ್ರದಾಯಕಮ್ ।
ಸರ್ವಸಿದ್ಧಿಕರಂ ಪುಣ್ಯಂ ಭುಕ್ತಿಮುಕ್ತಿಫಲಪ್ರದಮ್ ॥ ೨

ಬ್ರಹ್ಮಘ್ನಶ್ಚ ಸುರಾಪಶ್ಚ ಸ್ತೇಯೀ ಚ ಗುರುತಲ್ಪಗಃ ।
ಶರಣಾಗತಘಾತೀ ಚ ಮಿತ್ರವಿಶ್ವಾಸಘಾತಕಃ ॥ ೩

ಮಾತೃಹಾ ಪಿತೃಹಾ ಚೈವ ಭ್ರೂಣಹಾ ವೀರಹಾ ತಥಾ ।
ಕೋಟಿಕೋಟಿಸಹಸ್ರಾಣಿ ಹ್ಯುಪಪಾಪಾನಿ ಯಾನ್ಯಪಿ ॥ ೪

ಸಂವತ್ಸರಂ ಕ್ರಮಾತ್ ಜಪ್ತ್ವಾ ಪ್ರತ್ಯಹಂ ರಾಮಸನ್ನಿಧೌ ।
ನಿಷ್ಕಂಟಕಂ ಸುಖಂ ಭುಕ್ತ್ವಾ ತತೋ ಮೋಕ್ಷಮವಾಪ್ನುಯಾತ್ ॥ ೫

ಶ್ರೀರಾಮನಾಮ್ನಾಂ ಪರಮಂ ಸಹಸ್ರಕಂ
ಪಾಪಾಪಹಂ ಸೌಖ್ಯವಿವೃದ್ಧಿಕಾರಕಮ್ ।
ಭವಾಪಹಂ ಭಕ್ತಜನೈಕಪಾಲಕಂ
ಸ್ತ್ರೀಪುತ್ರಪೌತ್ರಪ್ರದಮೃದ್ಧಿದಾಯಕಮ್ ॥ ೬

ಇತಿ ಶ್ರೀಶತಕೋಟಿರಾಮಚರಿತಾಂತರ್ಗತೇ
ಶ್ರೀಮದಾನಂದರಾಮಾಯಣೇ ವಾಲ್ಮೀಕೀಯೇ ರಾಜ್ಯಕಾಂಡೇ ಪೂರ್ವಾರ್ಧೇ
ಶ್ರೀರಾಮಚಂದ್ರಸಹಸ್ರನಾಮಸ್ತೋತ್ರಂ ಸಂಪೂರ್ಣಮ್

ಶ್ರೀರಾಮಚಂದ್ರಾಷ್ಟೋತ್ತರಶತನಾಮಸ್ತೋತ್ರಮ್

ಓಮ್ ಅಸ್ಯ ಶ್ರೀರಾಮಚಂದ್ರನಾಮಾಷ್ಟೋತ್ತರಶತಮಂತ್ರಸ್ಯ ಬ್ರಹ್ಮಾ ಋಷಿಃ । ಅನುಷ್ಟುಪ್ ಛಂದಃ । ಜಾನಕೀವಲ್ಲಭಃ ಶ್ರೀರಾಮಚಂದ್ರೋ ದೇವತಾ । ಓಂ ಬೀಜಮ್ । ನಮಃ ಶಕ್ತಿಃ । ಶ್ರೀರಾಮಚಂದ್ರಃ ಕೀಲಕಮ್ । ಶ್ರೀರಾಮಚಂದ್ರಪ್ರೀತ್ಯರ್ಥೇ ಜಪೇ ವಿನಿಯೋಗಃ ।

ಓಂ ನಮೋ ಭಗವತೇ ರಾಜಾಧಿರಾಜಾಯ ಪರಮಾತ್ಮನೇ
ಅಂಗುಷ್ಠಾಭ್ಯಾಂ ನಮಃ ॥
ಓಂ ನಮೋ ಭಗವತೇ ವಿದ್ಯಾಧಿರಾಜಾಯ ಹಯಗ್ರೀವಾಯ
ತರ್ಜನೀಭ್ಯಾಂ ನಮಃ ॥
ಓಂ ನಮೋ ಭಗವತೇ ಜಾನಕೀವಲ್ಲಭಾಯ
ಮಧ್ಯಮಾಭ್ಯಾಂ ನಮಃ ॥
ಓಂ ನಮೋ ಭಗವತೇ ರಘುನಂದನಾಯಾಮಿತತೇಜಸೇ
ಅನಾಮಿಕಾಭ್ಯಾಂ ನಮಃ ॥
ಓಂ ನಮೋ ಭಗವತೇ ಕ್ಷೀರಾಬ್ಧಿಮಧ್ಯಸ್ಥಾಯ ನಾರಾಯಣಾಯ
ಕನಿಷ್ಠಿಕಾಭ್ಯಾಂ ನಮಃ ॥
ಓಂ ನಮೋ ಭಗವತೇ ಸತ್ಪ್ರಕಾಶಾಯ ರಾಮಾಯ
ಕರತಲಕರಪೃಷ್ಠಾಭ್ಯಾಂ ನಮಃ ॥

ಓಂ ನಮೋ ಭಗವತೇ ರಾಜಾಧಿರಾಜಾಯ ಪರಮಾತ್ಮನೇ ಹೃದಯಾಯ ನಮಃ ॥
ಓಂ ನಮೋ ಭಗವತೇ ವಿದ್ಯಾಧಿರಾಜಾಯ ಹಯಗ್ರೀವಾಯ ಶಿರಸೇ ಸ್ವಾಹಾ ॥
ಓಂ ನಮೋ ಭಗವತೇ ಜಾನಕೀವಲ್ಲಭಾಯ ಶಿಖಾಯೈ ವಷಟ್ ॥
ಓಂ ನಮೋ ಭಗವತೇ ರಘುನಂದನಾಯಾಮಿತತೇಜಸೇ ಕವಚಾಯ ಹುಮ್ ॥
ಓಂ ನಮೋ ಭಗವತೇ ಕ್ಷೀರಾಬ್ಧಿಮಧ್ಯಸ್ಥಾಯ ನಾರಾಯಣಾಯ ನೇತ್ರತ್ರಯಾಯ ವೌಷಟ್ ॥
ಓಂ ನಮೋ ಭಗವತೇ ಸತ್ಪ್ರಕಾಶಾಯ ರಾಮಾಯ ಅಸ್ತ್ರಾಯ ಫಟ್ ॥

ಧ್ಯಾನಮ್

ಮಂದಾರಾಕೃತಿಪುಣ್ಯಧಾಮವಿಲಸದ್ವಕ್ಷಃಸ್ಥಲಂ ಕೋಮಲಂ
ಶಾಂತಂ ಕಾಂತಮಹೇಂದ್ರನೀಲರುಚಿರಾಭಾಸಂ ಸಹಸ್ರಾನನಮ್ ।
ವಂದೇಽಹಂ ರಘುನಂದನಂ ಸುರಪತಿಂ ಕೋದಂಡದೀಕ್ಷಾಗುರುಂ
ರಾಮಂ ಸರ್ವಜಗತ್ಸುಸೇವಿತಪದಂ ಸೀತಾಮನೋವಲ್ಲಭಮ್ ॥

ಅಥ ಶ್ರೀರಾಮಚಂದ್ರಾಷ್ಟೋತ್ತರಶತನಾಮಸ್ತೋತ್ರಮ್

ಸಹಸ್ರಶೀರ್ಷ್ಣೇ ವೈ ತುಭ್ಯಂ ಸಹಸ್ರಾಕ್ಷಾಯ ತೇ ನಮಃ ।
ನಮಃ ಸಹಸ್ರಹಸ್ತಾಯ ಸಹಸ್ರಚರಣಾಯ ಚ ॥ ೧

ನಮೋ ಜೀಮೂತವರ್ಣಾಯ ನಮಸ್ತೇ ವಿಶ್ವತೋಮುಖ ।
ಅಚ್ಯುತಾಯ ನಮಸ್ತುಭ್ಯಂ ನಮಸ್ತೇ ಶೇಷಶಾಯಿನೇ ॥ ೨

ನಮೋ ಹಿರಣ್ಯಗರ್ಭಾಯ ಪಂಚಭೂತಾತ್ಮನೇ ನಮಃ ।
ನಮೋ ಮೂಲಪ್ರಕೃತಯೇ ದೇವಾನಾಂ ಹಿತಕಾರಿಣೇ ॥ ೩

ನಮಸ್ತೇ ಸರ್ವಲೋಕೇಶ ಸರ್ವದುಃಖನಿಷೂದನ।
ಶಂಖಚಕ್ರಗದಾಪದ್ಮಜಟಾಮಕುಟಧಾರಿಣೇ ॥ ೪

ನಮೋ ಗರ್ಭಾಯ ತತ್ತ್ವಾಯ ಜ್ಯೋತಿಷಾಂ ಜ್ಯೋತಿಷೇ ನಮಃ ।
ಓಂ ನಮೋ ವಾಸುದೇವಾಯ ನಮೋ ದಶರಥಾತ್ಮಜ ॥ ೫

ನಮೋ ನಮಸ್ತೇ ರಾಜೇಂದ್ರ ಸರ್ವಸಂಪತ್ಪ್ರದಾಯ ಚ ।
ನಮಃ ಕಾರುಣ್ಯರೂಪಾಯ ಕೈಕೇಯೀಪ್ರಿಯಕಾರಿಣೇ ॥ ೬

ನಮೋ ದಾಂತಾಯ ಶಾಂತಾಯ ವಿಶ್ವಾಮಿತ್ರಪ್ರಿಯಾಯ ತೇ ।
ಯಜ್ಞೇಶಾಯ ನಮಸ್ತುಭ್ಯಂ ನಮಸ್ತೇ ಕ್ರತುಪಾಲಕ ॥ ೭

ನಮೋ ನಮಃ ಕೇಶವಾಯ ನಮೋ ನಾಥಾಯ ಶಾರ್ಙ್ಗಿಣೇ।
ನಮಸ್ತೇ ರಾಮಚಂದ್ರಾಯ ನಮೋ ನಾರಾಯಣಾಯ ಚ ॥ ೮

ನಮಸ್ತೇ ರಾಮಭದ್ರಾಯ ಮಾಧವಾಯ ನಮೋ ನಮಃ।
ಗೋವಿಂದಾಯ ನಮಸ್ತುಭ್ಯಂ ನಮಸ್ತೇ ಪರಮಾತ್ಮನೇ ॥ ೯

ನಮಸ್ತೇ ವಿಷ್ಣುರೂಪಾಯ ರಘುನಾಥಾಯ ತೇ ನಮಃ ।
ನಮಸ್ತೇಽನಾಥನಾಥಾಯ ನಮಸ್ತೇ ಮಧುಸೂದನ ॥ ೧೦

ತ್ರಿವಿಕ್ರಮ ನಮಸ್ತೇಽಸ್ತು ಸೀತಾಯಾಃ ಪತಯೇ ನಮಃ ।
ವಾಮನಾಯ ನಮಸ್ತುಭ್ಯಂ ನಮಸ್ತೇ ರಾಘವಾಯ ಚ ॥ ೧೧

ನಮೋ ನಮಃ ಶ್ರೀಧರಾಯ ಜಾನಕೀವಲ್ಲಭಾಯ ಚ ।
ನಮಸ್ತೇಽಸ್ತು ಹೃಷೀಕೇಶ ಕಂದರ್ಪಾಯ ನಮೋ ನಮಃ ॥ ೧೨

ನಮಸ್ತೇ ಪದ್ಮನಾಭಾಯ ಕೌಸಲ್ಯಾಹರ್ಷಕಾರಿಣೇ ।
ನಮೋ ರಾಜೀವನಯನ ನಮಸ್ತೇ ಲಕ್ಷ್ಮಣಾಗ್ರಜ ॥ ೧೩

ನಮೋ ನಮಸ್ತೇ ಕಾಕುತ್ಸ್ಥ ನಮೋ ದಾಮೋದರಾಯ ಚ ।
ವಿಭೀಷಣಪರಿತ್ರಾತರ್ನಮಃ ಸಂಕರ್ಷಣಾಯ ಚ ॥ ೧೪

ವಾಸುದೇವ ನಮಸ್ತೇಽಸ್ತು ನಮಸ್ತೇ ಶಂಕರಪ್ರಿಯ ।
